# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 08-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ರಾಜ್ಯದಲ್ಲಿ ಸಕ್ರಿಯ ಪ್ರಕರಣ 9 ಸಾವಿರಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಕೆಲವು ದಿನಗಳಿಂದ ಸಾವಿರದ ಗಡಿಯ ಆಸುಪಾಸಿನಲ್ಲಿಯೇ ಇದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 9,119ಕ್ಕೆ ಇಳಿಕೆಯಾಗಿದೆ.

ಕಳೆದ ತಿಂಗಳು ಈ ವೇಳೆ 25 ಸಾವಿರ ಸಕ್ರಿಯ ಪ್ರಕರಣಗಳಿದ್ದವು. ರಾಜ್ಯದಲ್ಲಿ ಗುರುವಾರ 761 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.24 ಲಕ್ಷ ದಾಟಿದೆ. ಸೋಂಕಿತರಲ್ಲಿ ಮತ್ತೆ 7 ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,131ಕ್ಕೆ ತಲುಪಿದೆ.

ಒಂದೇ ದಿನ 1.19 ಲಕ್ಷ ಆರ್‌ಟಿ-ಪಿಸಿಆರ್ ಸೇರಿದಂತೆ 1.29 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈ ತಿಂಗಳು 7 ದಿನಗಳಲ್ಲಿ 7.22 ಲಕ್ಷ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಕೋವಿಡ್ ಪೀಡಿತರಲ್ಲಿ ಮತ್ತೆ 812 ಮಂದಿ ಗುಣಮುಖರಾಗಿದ್ದು, ಇದರಿಂದಾಗಿ ಚೇತರಿಸಿಕೊಂಡವರ ಸಂಖ್ಯೆ 9.03 ಲಕ್ಷಕ್ಕೆ ತಲುಪಿದೆ. ಕಳೆದ 14 ದಿನಗಳ ಅವಧಿಯಲ್ಲಿ 58 ಸಾವಿರ ನೇರ ಹಾಗೂ 66 ಸಾವಿರ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲಾಗಿದೆ.

ರಾಜ್ಯಕ್ಕೆ ಬ್ರಿಟನ್‌ನಿಂದ ಬಂದವರಲ್ಲಿ ಈವರೆಗೆ 40 ಮಂದಿ ಸೋಂಕಿತರಾಗಿದ್ದಾರೆ. ಅವರ ಸಂಪರ್ಕ ಹೊಂದಿದ್ದವರಲ್ಲಿ 25 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರೂಪಾಂತರಗೊಂಡ ಕೊರೊನಾ ವೈರಾಣು 11 ಮಂದಿಯಲ್ಲಿ ಕಾಣಿಸಿಕೊಂಡಿದೆ.

ಬೆಂಗಳೂರಿನಲ್ಲಿ ಮತ್ತೆ 399 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.91 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 45 ಪ್ರಕರಣಗಳು ವರದಿಯಾಗಿದೆ. ದಕ್ಷಿಣ ಕನ್ನಡದಲ್ಲಿ 37, ತುಮಕೂರು ಹಾಗೂ ಹಾಸನದಲ್ಲಿ ತಲಾ 25, ಶಿವಮೊಗ್ಗದಲ್ಲಿ 23, ಚಿಕ್ಕಬಳ್ಳಾಪುರದಲ್ಲಿ 20 ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 5, ಕೋಲಾರ ಹಾಗೂ ತುಮಕೂರಿನಲ್ಲಿ ತಲಾ ಒಂದು ಮರಣ ಪ್ರಕರಣ ಹೊಸದಾಗಿ ವರದಿಯಾಗಿದೆ.

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**3,91,184** ಒಟ್ಟು ಸೋಂಕಿತರು

**3,81,220** ಗುಣಮುಖರಾದವರು

**5,622** ಸಕ್ರಿಯ ಪ್ರಕರಣ




### ಗುರುವಾರದ ಏರಿಕೆ.

**399** ದೃಢಪಟ್ಟ ಪ್ರಕರಣ

**451** ಗುಣಮುಖ

**05** ಸಾವು

### ಮುಖ್ಯಾಂಶಗಳು

- ಬ್ರಿಟನ್‌ನಿಂದ ಬಂದವರಲ್ಲಿ ಈವರೆಗೆ 40 ಮಂದಿ ಸೋಂಕಿತರು
- ಈ ತಿಂಗಳಲ್ಲಿ 7.22 ಲಕ್ಷ ಮಂದಿ ಕೋವಿಡ್ ಪರೀಕ್ಷೆ

### 161 ಶಿಕ್ಷಕರಿಗೆ ಸೋಂಕು ದೃಢ

ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ತರಗತಿ ಆರಂಭಗೊಳ್ಳುವುದಕ್ಕೂ (ಜ. 1) ಮೊದಲೇ ಆರ್‌ಟಿಪಿಸಿಆರ್ ತಪಾಸಣೆಗೆ ಒಳಗಾದ ವಿವಿಧ ಶಾಲೆಗಳ ಒಟ್ಟು 161 ಶಿಕ್ಷಕರು ಮತ್ತು ಐವರು ಇತರ ಸಿಬ್ಬಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ 19, ಬೆಳಗಾವಿಯಲ್ಲಿ 18, ಚಿಕ್ಕಮಗಳೂರು 13, ಗದಗ ಮತ್ತು ಮೈಸೂರು, ಶಿವಮೊಗ್ಗ, ತುಮಕೂರು ತಲಾ 11, ಚಾಮರಾಜನಗರದಲ್ಲಿ 10, ಚಿತ್ರದುರ್ಗಮ ಹಾವೇರಿಯಲ್ಲಿ ತಲಾ 9, ಕಲಬುರ್ಗಿ 8, ಮಂಡ್ಯ 7, ಬೆಂಗಳೂರು ನಗರ ಉತ್ತರ, ಬೆಂಗಳೂರು ನಗರ ದಕ್ಷಿಣ ಮತ್ತು ದಕ್ಷಿಣ ಕನ್ನಡ ಶೈಕ್ಷಣಿಕ ಜಿಲ್ಲೆಯಲ್ಲಿ ತಲಾ 4, ದಾವಣಗೆರೆ ಮತ್ತು ಉಡುಪಿ ತಲಾ 3, ಬೆಂಗಳೂರು ಗ್ರಾಮಾಂತರ ಮತ್ತು ಯಾದಗಿರಿಯಲ್ಲಿ ತಲಾ ಇಬ್ಬರು, ಕೊಪ್ಪಳ ಮತ್ತು ವಿಜಯಪುರ ತಲಾ ಒಬ್ಬರು ಶಿಕ್ಷಕರಿಗೆ ಆರ್‌ಟಿಪಿಸಿಆರ್ ತಪಾಸಣೆಯಲ್ಲಿ ಪಾಸಿಟಿವ್ ವರದಿ ಬಂದಿದೆ.

ಚಿಕ್ಕಮಗಳೂರಿನಲ್ಲಿ ಇಬ್ಬರು ಮತ್ತು ಚಾಮರಾಜನಗರ, ಉಡುಪಿ, ಉತ್ತರಕನ್ನಡ ಜಿಲ್ಲೆಯಲ್ಲಿ ತಲಾ ಒಬ್ಬರು ಬೋಧಕೇತರ ಸಿಬ್ಬಂದಿಗೆ ಸೋಂಕು ತಗಲಿದೆ.

‘ಶಾಲೆ ಆರಂಭವಾಗುವ ಮೊದಲೇ ಈ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ಆರ್‌ಟಿಪಿಸಿಆರ್ ತಪಾಸಣೆಗೆ ಒಳಗಾಗಿದ್ದರು. ಅವರೆಲ್ಲರೂ ಕ್ವಾರಂಟೈನ್‌ನಲ್ಲಿ ಇದ್ದಾರೆ. ಅಲ್ಲದೆ, ಯಾರೂ ಶಾಲೆಗಳಿಗೆ ಬಂದಿಲ್ಲ’ ಎಂದು ಶಿಕ್ಷಣ ಇಲಾಖೆಯ ಮೂಲಗಳು ಹೇಳಿವೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಬಿಬಿಎಂಪಿ ಭರದ ಸಿದ್ಧತೆ • 1507 ಕೇಂದ್ರಗಳ ಸ್ಥಾಪನೆ • ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ

# ಲಸಿಕೆ ಪಡೆಯಲು ಒಟಿಪಿ ಕಡ್ಡಾಯ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಮಾತ್ರ ಕೋವಿಡ್ ಲಸಿಕೆ ನೀಡಲಾಗುತ್ತದೆ. ಇದು ದುರ್ಬಳಕೆ ಆಗುವುದನ್ನು ತಡೆಯಲು ಕಟ್ಟುನಿಟ್ಟಿನ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಮೊದಲ ಹಂತದಲ್ಲಿ ಲಸಿಕೆ ನೀಡುವುದಕ್ಕೆ ಒಟ್ಟು 1,68,820 ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. ಅಷ್ಟೂ ಮಂದಿಯ ಮೊಬೈಲ್ ಸಂಖ್ಯೆಗಳನ್ನು ಕೇಂದ್ರ ಸರ್ಕಾರದ ಕೋವಿನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

‘ನಿಗದಿತ ದಿನದಂದು ಲಸಿಕೆ ಕೇಂದ್ರಕ್ಕೆ ಬರುವಂತೆ ಫಲಾನುಭವಿಗಳಿಗೆ ಸಂದೇಶ ಕಳುಹಿಸಲಾಗುತ್ತದೆ. ಲಸಿಕಾ ಕೇಂದ್ರಕ್ಕೆ ಬಂದವರು ನಾವು ಮೊದಲೇ ಗುರುತಿಸಿದ ಫಲಾನುಭವಿ ಹೌದೇ ಅಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತಂತ್ರಜ್ಞಾನದ ನೆರವನ್ನು ಪಡೆಯಲಿದ್ದೇವೆ. ಫಲಾನುಭವಿಗಳು ಲಸಿಕೆ ಕೇಂದ್ರಕ್ಕೆ ಬಂದಾಗ ಅವರ ಹೆಸರು ಹಾಗೂ ವಿವರವನ್ನು ಕೋವಿನ್ ಪೋರ್ಟಲ್‌ನಲ್ಲಿ ದಾಖಲಿಸಲಾಗುತ್ತದೆ. ಆಗ ಫಲಾನುಭವಿಯ ಮೊಬೈಲ್‌ಗೆ ಒಮ್ಮೆ ಮಾತ್ರ ಬಳಸುವ ರಹಸ್ಯ ಸಂಖ್ಯೆ (ಒಟಿಪಿ) ರವಾನೆಯಾಗುತ್ತದೆ. ಸರಿಯಾದ ಒಟಿಪಿ ನೀಡಿದರೆ ಮಾತ್ರ ಅವವರಿಗೆ ಲಸಿಕೆ ನೀಡಲಾಗುತ್ತದೆ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೊದಲ ಹಂತದಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಮಂಡಳಿಯಲ್ಲಿ ನೋಂದಾಯಿಸಿರುವ 4,300 ಸಂಸ್ಥೆಗಳಲ್ಲಿ ಹಾಗೂ 292 ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯರು, ಶುಶ್ರೂಷಕಿಯರು, ಅರೆ ವೈದ್ಯಕೀಯ ಸಿಬ್ಬಂದಿ ಮುಂತಾದ ಆರೋಗ್ಯ ಕಾರ್ಯಕರ್ತರಿಗೆ ಮಾತ್ರ ಲಸಿಕೆ ನೀಡಲಾಗುತ್ತದೆ. ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದ ಬಿಬಿಎಂಪಿ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಹಾಗೂ ಇತರ ಇಲಾಖೆಗಳ ಸಿಬ್ಬಂದಿ ಲಸಿಕೆಗಾಗಿ ಇನ್ನಷ್ಟು ಕಾಯಬೇಕು. ಅವರಿಗೆಲ್ಲ ಎರಡನೇ ಹಂತದಲ್ಲಿ ಲಸಿಕೆ ನೀಡಲಾಗುತ್ತದೆ’ ಎಂದರು.

‘ಲಸಿಕೆ ರವಾನೆ ಇನ್ನೂ ಆರಂಭವಾಗಿಲ್ಲ. ಯಾವಾಗ ಲಸಿಕೆ ಕೈಸೇರಲಿದೆ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಆದರೆ, ಲಸಿಕೆ ಸಂಗ್ರಹಿಸಲು ಬೇಕಾದ ಶೈತ್ಯಾಗಾರಗಳ ವ್ಯವಸ್ಥೆ ಹಾಗೂ ಕೈ ಸೇರಿದ ಬಳಿಕ ಆರೋಗ್ಯ ಕಾರ್ಯಕರ್ತರಿಗೆ ಅದನ್ನು ನೀಡುವುದಕ್ಕೆ ಅಗತ್ಯ ಇರುವ ಎಲ್ಲ ಸಿದ್ಧತೆ ಮಾಡಿಕೊಂಡಿದ್ದೇವೆ’ ಎಂದು ಅವರು ತಿಳಿಸಿದರು.

**1,507 ಕಡೆ ಲಸಿಕೆ ಕೇಂದ್ರ:** ‘ಎಲ್ಲೆಲ್ಲಿ ಲಸಿಕಾ ಕೇಂದ್ರಗಳ ಅಗತ್ಯ ಇವೆ ಎಂಬ ಬಗ್ಗೆ ಈಗಾಗಲೇ ಮ್ಯಾಪಿಂಗ್ ಮಾಡಿದ್ದೇವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 1,507 ಕಡೆ ಲಸಿಕೆ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಬಿಬಿಎಂಪಿ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜುಗಳು, ಸರ್ಕಾರಿ ಆಸ್ಪತ್ರೆಗಳು, ಖಾಸಗಿ ನರ್ಸಿಂಗ್ ಹೋಂ, ಖಾಸಗಿ ಆಸ್ಪತ್ರೆಗಳು, ಖಾಸಗಿ ವೈದ್ಯಕೀಯ ಕಾಲೇಜುಗಳು ಇದರಲ್ಲಿ ಸೇರಿವೆ’ ಎಂದು ಬಿಬಿಎಂಪಿ ಆಯುಕ್ತರು ಮಾಹಿತಿ ನೀಡಿದರು.

‘ಪ್ರತಿ ಲಸಿಕಾ ಕೇಂದ್ರದಲ್ಲಿ ಲಸಿಕೆ ನೀಡಲು 1,507 ಸಿಬ್ಬಂದಿಯನ್ನು ನಿಯೋಜಿಸಲಿದ್ದೇವೆ. ಇವರಲ್ಲದೇ ಪ್ರತಿ ಕೇಂದ್ರದಲ್ಲಿ ನಾಲ್ವರು ಸಹಾಯಕ ಸಿಬ್ಬಂದಿಯೂ ಕಾರ್ಯನಿರ್ವಹಿಸಲಿದ್ದಾರೆ. ಲಸಿಕಾ ಕೇಂದ್ರದಲ್ಲಿ ಕಾಯುವ ಕೊಠಡಿ, ಲಸಿಕೆ ನೀಡುವ ಕೊಠಡಿ ಹಾಗೂ ಪರಿವೀಕ್ಷಣಾ ಕೊಠಡಿಗಳಿರುತ್ತವೆ. ಫಲಾನುಭವಿಗಳ ವಿವರವನ್ನು ಕೋವಿನ್ ಪೋರ್ಟಲ್‌ಗೆ ನೋಂದಾಯಿಸಲು, ಕಾಯುವ ಕೊಠಡಿ ಹಾಗೂ ಪರಿವೀಕ್ಷಣಾ ಕೊಠಡಿಗಳನ್ನು ನಿರ್ವಹಿಸಲು ಸಹಾಯಕ ಸಿಬ್ಬಂದಿ ನೆರವಾಗಲಿದ್ದಾರೆ’ ಎಂದು ವಿವರಿಸಿದರು.

## ‘ಅರ್ಧ ಗಂಟೆ ನಿಗಾ’

‘ಲಸಿಕೆ ಪಡೆದ ತಕ್ಷಣವೇ ಫಲಾನುಭವಿಯನ್ನು ಲಸಿಕಾ ಕೇಂದ್ರದಿಂದ ಹೊರಗೆ ಕಳುಹಿಸಿಕೊಡುವುದಿಲ್ಲ. ಅವರನ್ನು ಪರಿವೀಕ್ಷಣಾ ಕೊಠಡಿಯಲ್ಲಿ ಅರ್ಧ ಗಂಟೆ ಕುಳ್ಳಿರಿಸುತ್ತೇವೆ. ಲಸಿಕೆ ಪಡೆದ ಬಳಿಕ ಅವರ ಆರೋಗ್ಯದಲ್ಲಿ ಏನಾದರೂ ಏರುಪೇರಾಗುತ್ತವೆಯೇ ಎಂದು ನಿಗಾ ಇಡುತ್ತೇವೆ. ಯಾವುದೇ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳದಿದ್ದರೆ ಅವರನ್ನು ಕಳುಹಿಸಿಕೊಡಲಾಗುತ್ತದೆ’ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿದರು.

## ಕೋವಿಡ್ ಲಸಿಕೆ ಪಡೆಯುವವರ ವಲಯವಾರು ವಿವರ

| ವಲಯ | ಖಾಸಗಿ ವೈದ್ಯಕೀಯ ಸಂಸ್ಥೆಗಳ ಫಲಾನುಭವಿಗಳು | ಖಾಸಗಿ ವೈದ್ಯಕೀಯ ಸಂಸ್ಥೆಗಳು | ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಫಲಾನುಭವಿಗಳು | ಸರ್ಕಾರಿ ವೈದ್ಯಕೀಯ ಸಂಸ್ಥೆಗಳು |
|---|---|---|---|---|
| ಯಲಹಂಕ | 12,275 | 380 | 952 | 18 |
| ದಾಸರಹಳ್ಳಿ | 8,210 | 178 | 466 | 13 |
| ಪಶ್ಚಿಮ | 25,556 | 904 | 5521 | 79 |
| ಪೂರ್ವ | 32,760 | 851 | 4,137 | 49 |
| ಮಹದೇವಪುರ | 17,747 | 458 | 762 | 18 |
| ದಕ್ಷಿಣ | 26,452 | 945 | 8,337 | 66 |
| ಆರ್.ಆರ್.ನಗರ | 15,902 | 338 | 714 | 26 |
| ಬೊಮ್ಮನಹಳ್ಳಿ | 7,126 | 242 | 1,912 | 18 |

## ಅಂಕಿ-ಅಂಶಗಳು

**1,46,019**
ಬಿಬಿಎಂಪಿ ವ್ಯಾಪ್ತಿಯಲ್ಲಿ ಲಸಿಕೆ ಪಡೆಯಲಿರುವ ಖಾಸಗಿ ವೈದ್ಯಕೀಯ **ಸಂಸ್ಥೆಗಳ ಆರೋಗ್ಯ ಕಾರ್ಯಕರ್ತರು**

**4,300**
ಖಾಸಗಿ ವೈದ್ಯಕೀಯ ಸಂಸ್ಥೆಗಳ **ಸಿಬ್ಬಂದಿಗೆ ಲಸಿಕೆ ಲಭ್ಯ**

**292**
ಸರ್ಕಾರಿ ವೈದ್ಯಕೀಯ ಸಂಸ್ಥೆಗಳ **ಸಿಬ್ಬಂದಿಗೆ ಲಸಿಕೆ ಲಭ್ಯ**

**21,918**
ಲಸಿಕೆ ಪಡೆಯಲಿರುವ ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಆರೋಗ್ಯ **ಕಾರ್ಯಕರ್ತರು**

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಲಸಿಕೆ: ಇಂದು ತಾಲೀಮು

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡುವ ಬಗ್ಗೆ ಶುಕ್ರವಾರ ವಿಶೇಷ ತಾಲೀಮು ಏರ್ಪಡಿಸಲಾಗಿದೆ.

ಎಂಟು ವಲಯಗಳ ಸಾರ್ವಜನಿಕ ಆರೋಗ್ಯ ಕೇಂದ್ರ, ರೆಫೆರಲ್ ಆಸ್ಪತ್ರೆ, ಮೆಡಿಕಲ್ ಕಾಲೇಜು, ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ತಾಲೀಮು ಬೆಳಿಗ್ಗೆ 9ರಿಂದ 11ರವರೆಗೆ ನಡೆಯಲಿದೆ ಎಂದು ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ. ಕೆ.ವಿಜಯೇಂದ್ರ ತಿಳಿಸಿದ್ದಾರೆ.

ಲಸಿಕೆ ತಾಲೀಮು ನಡೆಸಲು ಪ್ರತಿ ವಲಯದಲ್ಲಿ ತಲಾ ಒಂದು ಸ್ಥಳವನ್ನು ಗೊತ್ತುಪಡಿಸಲಾಗಿದೆ.

## ಲಸಿಕೆ ತಾಲೀಮು ನಡೆಯುವ ಸ್ಥಳಗಳು

| ವಲಯ | ಸ್ಥಳ |
|---|---|
| ಬೊಮ್ಮನಹಳ್ಳಿ | ಸಿಂಗಸಂದ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ |
| ದಾಸರಹಳ್ಳಿ | ಸಪ್ತಗಿರಿ ವೈದ್ಯಕೀಯ ಕಾಲೇಜು |
| ಪೂರ್ವ | ಹಲಸೂರು ರೆಫೆರಲ್ ಆಸ್ಪತ್ರೆ |
| ಮಹದೇವಪುರ | ಕೆ.ಆರ್.ಪುರ ಸರ್ಕಾರಿ ಆಸ್ಪತ್ರೆ |
| ಆರ್.ಆರ್.ನಗರ | ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರ |
| ದಕ್ಷಿಣ | ಕಿಮ್ಸ್ ವೈದ್ಯಕೀಯ ಕಾಲೇಜು |
| ಪಶ್ಚಿಮ | ಬೆಂಗಳೂರು ವೈದ್ಯಕೀಯ ಕಾಲೇಜು |
| ಯಲಹಂಕ | ಆಸ್ಟರ್ ಸಿಎಂಐ ಆಸ್ಪತ್ರೆ |

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ರಸ್ತೆ ವಿಸ್ತರಣೆ ವಿಳಂಬ: ಹೈಕೋರ್ಟ್ ಅಸಮಾಧಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಳ್ಳಾರಿ ರಸ್ತೆಯ ಮೇಕ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣ ನಡುವಿನ ರಸ್ತೆ ವಿಸ್ತರಣೆ ಸಂಬಂಧ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶಗಳನ್ನು ಪಾಲಿಸಿರುವ ಸಂಬಂಧ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ನಗರದ ಸಮರ್ಪಣಾ ಸಾಮಾಜಿಕ-ಸಾಂಸ್ಕೃತಿಕ ಟ್ರಸ್ಟ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ಫೆಬ್ರುವರಿ 15ರೊಳಗೆ ಅನುಪಾಲನಾ ವರದಿ ಸಲ್ಲಿಸಬೇಕು’ ಎಂದು ತಿಳಿಸಿದೆ.

‘ಅಸ್ತಿತ್ವದಲ್ಲಿರುವ ಟಿಡಿಆರ್(ಅಭಿವೃದ್ಧಿ ಹಕ್ಕು) ನಿಯಮಗಳ ಪ್ರಕಾರ ಪ್ರಮಾಣ ಪತ್ರಗಳನ್ನು ನೀಡುವ ಮೂಲಕ ಆಸ್ತಿ ಸ್ವಾಧೀನಪಡಿಸಿಕೊಳ್ಳಲು 2014ರಲ್ಲೇ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. 2016ರಲ್ಲಿ ಹೈಕೋರ್ಟ್ ಕೂಡ ಆದೇಶ ನೀಡಿದೆ. ಆದರೆ, 16 ಎಕರೆ ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಆಡಳಿತಾತ್ಮಕ ಅನುಮೋದನೆಯನ್ನು ಮಾತ್ರ ನೀಡಿದೆ. ಪ್ರಕ್ರಿಯೆ ಮುಂದುವರಿಸಿಲ್ಲ’ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಗುರುತಿಸಲಾದ ರವಾನೆ ಕೇಂದ್ರಗಳಿಗೆ ಲಸಿಕೆ

# ಲಸಿಕೆ ಸ್ವೀಕರಿಸಲು ಸಿದ್ಧರಾಗಿ: ರಾಜ್ಯಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಡ್ ಲಸಿಕೆ ಪೂರೈಕೆ ಶೀಘ್ರದಲ್ಲೇ ಆರಂಭವಾಗಲಿದ್ದು, ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸನ್ನದ್ಧವಾಗಿ ಇರಬೇಕು ಎಂದು ಕೇಂದ್ರ ಸರ್ಕಾರ ಗುರುವಾರ ಸೂಚನೆ ನೀಡಿದೆ.

19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಗುರುತಿಸಲಾದ ರವಾನೆ ಕೇಂದ್ರಗಳಿಗೆ ಲಸಿಕೆ ಕಳುಹಿಸಲಾಗುವುದು ಎಂದು ಸಚಿವಾಲಯದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸಗಡ, ದೆಹಲಿ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಜೊತೆ ಕೇಂದ್ರ ಈ ಮಾಹಿತಿ ಹಂಚಿಕೊಂಡಿದೆ.

ಉಳಿದ 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಲಸಿಕೆಯನ್ನು ಆಯಾ ಸರ್ಕಾರಿ ವೈದ್ಯಕೀಯ ಡಿಪ್ಪೋಗಳಿಂದ ಪಡೆದುಕೊಳ್ಳಬೇಕು. ಅಂಡಮಾನ್ ಮತ್ತು ನಿಕೋಬಾರ್, ಅರುಣಾಚಲ ಪ್ರದೇಶ, ಚಂಡೀಗಡ, ನಗರ್ ಹವೇಲಿ, ದಮನ್ ಮತ್ತು ಡಿಯು, ಗೋವಾ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಲಕ್ಷದ್ವೀಪ, ಮಣಿಪುರ, ಮೇಘಾಲಯ, ಮಿಜೋರಾಂ, ಪುದುಚೇರಿ, ಸಿಕ್ಕಿಂ, ತ್ರಿಪುರಾ ಮತ್ತು ಉತ್ತರಾಖಂಡಗಳಿಗೆ ಈ ಸೂಚನೆ ನೀಡಲಾಗಿದೆ.

ಲಸಿಕೆಗಳನ್ನು ಸ್ವೀಕರಿಸಲು ಮುಂಗಡ ತಯಾರಿ ಮತ್ತು ಸಿದ್ಧತೆಯನ್ನು ಖಚಿತಪಡಿಸಿಕೊಳ್ಳಿ ಎಂದು ಆರೋಗ್ಯ ಸಚಿವಾಲಯದ ಸಲಹೆಗಾರ ಡಾ.ಪ್ರದೀಪ್ ಹಾಲ್ದರ್ ಅವರು ಜನವರಿ 5ರಂದು ಬರೆದ ಪತ್ರದಲ್ಲಿ ಹೇಳಿದ್ದಾರೆ. ನೋಂದಾಯಿತ ಫಲಾನುಭವಿಗಳಿಗೆ ನೀಡಲು ಆಯಾ ಜಿಲ್ಲೆಗಳಿಗೆ ಲಸಿಕೆಗಳನ್ನು ವಿತರಿಸಲಾಗುವುದು. ಇದಕ್ಕಾಗಿ ಶೀಘ್ರದಲ್ಲೇ ಪ್ರತ್ಯೇಕ ಸಂವಹನ ನಡೆಸಲಾಗುವುದು ಎಂದು ಪತ್ರದಲ್ಲಿ ತಿಳಿಸಲಾಗಿದೆ.

**ಸಾಗಣೆಗೆ ಸನ್ನದ್ಧ:** ಪುಣೆಯಿಂದ ದೇಶಾದ್ಯಂತ ಕೋವಿಡ್ ಲಸಿಕೆಗಳನ್ನು ಸಾಗಿಸಲು ಸಜ್ಜಾಗಿರುವುದಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಗುರುವಾರ ತಿಳಿಸಿದೆ.

ಸೆರಂ ಇನ್‌ಸ್ಟಿಟ್ಯೂಟ್ ತಯಾರಿಸಿರುವ ಕೋವಿಶೀಲ್ಡ್ ಲಸಿಕೆಗಳು ಪುಣೆಯ ವಿಮಾನ ನಿಲ್ದಾಣದಿಂದ ಎಲ್ಲ ಕಡೆ ಸರಬರಾಜು ಆಗಲಿವೆ. ಎಎಐ ತನ್ನ ಅಂಗಸಂಸ್ಥೆ ಎಎಐ ಕಾರ್ಗೋ ಲಾಜಿಸ್ಟಿಕ್ಸ್ ಮತ್ತು ಅಲೈಡ್ ಸರ್ವೀಸಸ್ ಕಂಪನಿ ಲಿಮಿಟೆಡ್ (ಎಎಐಸಿಎಎಲ್‌ಎಸ್) ಸಹ ಈ ಕಾರ್ಯಕ್ಕೆ ಸಿದ್ಧವಾಗಿದೆ ಎಂದು ತಿಳಿಸಿದೆ.

ಲಸಿಕೆ ಸಾಗಣೆ ಸಂಬಂಧ ಪ್ರಾಧಿಕಾರ, ಸೆರಂ ಸಂಸ್ಥೆ ಹಾಗೂ ಐಎಎಫ್ ಸಭೆ ನಡೆಸಿದ್ದವು.

**4 ರಾಜ್ಯಗಳಿಗೆ ಸೂಚನೆ:** ಕೋವಿಡ್ ಸಕ್ರಿಯ ಪ್ರಕರಣಗಳು ಶೇ 59ರಷ್ಟಿರುವ ಮಹಾರಾಷ್ಟ್ರ, ಕೇರಳ, ಛತ್ತೀಸಗಡ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳು ಕಟ್ಟೆಚ್ಚರದಿಂದ ಇರಬೇಕು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಸೂಚನೆ ನೀಡಿದ್ದಾರೆ. ಈ ರಾಜ್ಯಗಳಲ್ಲಿ ಕೊರೊನಾ ವೈರಸ್ ಪ್ರಕರಣಗಳಲ್ಲಿ ಇತ್ತೀಚಿನ ದಿನಗಳಲ್ಲಿ ಗಮನಾರ್ಹ ಹೆಚ್ಚಳ ಕಂಡುಬಂದಿದ್ದು, ನಿಯಂತ್ರಣಕ್ಕೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದ್ದಾರೆ.



ಮುಂಬೈನಲ್ಲಿರುವ ಕೋವಿಡ್–19 ಕೇಂದ್ರದಲ್ಲಿ ಗುರುವಾರ ಲಸಿಕೆ ನೀಡಿಕೆಯ ಅಣಕು ಪ್ರಕ್ರಿಯೆಗೆ ಆರೋಗ್ಯ ಕಾರ್ಯಕರ್ತರು ಸಿದ್ಧತೆ ನಡೆಸಿದರು –ಪಿಟಿಐ ಚಿತ್ರ

## ₹480 ಕೋಟಿ ಮಂಜೂರು

ಮೊದಲ ಮೂರು ಕೋಟಿ ಲಸಿಕೆಗಳಿಗಾಗಿ ಕೇಂದ್ರದ ಹಣಕಾಸು ಸಚಿವಾಲಯವು ಗುರುವಾರ ₹480 ಕೋಟಿ ಹಣ ಮಂಜೂರು ಮಾಡಿದೆ.

ಪ್ರತಿ ವ್ಯಕ್ತಿಗೆ ಕೇಂದ್ರ ಸರ್ಕಾರವು ₹160 ನಿಗದಿಪಡಿಸಿದೆ. ಇದರಲ್ಲಿ ಎರಡು ಡೋಸ್ ಲಸಿಕೆಗಳ ವೆಚ್ಚ ಮತ್ತು ಇತರ ಮೂಲಸೌಕರ್ಯ ವೆಚ್ಚಗಳು ಸೇರಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮೂಲಗಳು ತಿಳಿಸಿವೆ.

ಲಸಿಕೆ ತಯಾರಕರಾದ ಸೆರಂ ಸಂಸ್ಥೆ ಮತ್ತು ಭಾರತ್ ಬಯೊಟೆಕ್ ಜೊತೆ ಒಪ್ಪಂದವನ್ನು ಸಚಿವಾಲಯ ಇನ್ನೂ ಮಾಡಿಕೊಂಡಿಲ್ಲ. ಲಸಿಕೆ ದರ ಕುರಿತ ಮಾತುಕತೆ ನಡೆಯುತ್ತಿದ್ದು, ಎರಡೂ ಕಡೆಯವರು ಶೀಘ್ರದಲ್ಲೇ ಒಪ್ಪಂದಕ್ಕೆ ಬರುವ ನಿರೀಕ್ಷೆಯಿದೆ.

ಸರ್ಕಾರಕ್ಕೆ ₹200 ಹಾಗೂ ಖಾಸಗಿ ಮಾರುಕಟ್ಟೆಯಲ್ಲಿ ₹1,000ಕ್ಕೆ ಒಂದು ಡೋಸ್ ಮಾರಾಟ ಮಾಡಲಾಗುವುದು ಎಂದು ಸೆರಂ ಸಂಸ್ಥೆ ತಿಳಿಸಿತ್ತು. ಆದರೆ ಸರ್ಕಾರವು ಪ್ರತಿ ಡೋಸ್ ಅನ್ನು ₹70ರಿಂದ ₹80 ದರದಲ್ಲಿ ಖರೀದಿಸಲು ಉದ್ದೇಶಿಸಿದೆ.

## ಕೋವ್ಯಾಕ್ಸಿನ್: ಅಂತಿಮ ಹಂತದಲ್ಲಿ ಪ್ರಯೋಗ

ಭಾರತದಲ್ಲಿ ಸ್ಥಳೀಯವಾಗಿ ಕೋವಿಡ್–19 ಲಸಿಕೆ ಅಭಿವೃದ್ಧಿಪಡಿಸಿದ ಭಾರತ್ ಬಯೊಟೆಕ್, 3ನೇ ಹಂತದಲ್ಲಿ ಮಾನವರ ಮೇಲಿನ ಪ್ರಯೋಗಕ್ಕೆ 25,800 ಸ್ವಯಂಸೇವಕರ ದಾಖಲಾತಿ ಪೂರ್ಣಗೊಳಿಸಲಾಗಿದೆ ಎಂದು ಘೋಷಿಸಿದೆ.




ಸ್ವಯಂಸೇವಕರು ಗುರುವಾರದ ಹೊತ್ತಿಗೆ ಕನಿಷ್ಠ ಒಂದು ಡೋಸ್ ಲಸಿಕೆಯನ್ನು ಪಡೆದಿದ್ದಾರೆ. ಕೋವ್ಯಾಕ್ಸಿನ್ ಲಸಿಕೆಯ ಮೂರನೇ ಹಂತದ ಪ್ರಯೋಗ ನವೆಂಬರ್ ಮಧ್ಯದಲ್ಲಿ ದೇಶದ 25 ವೈದ್ಯಕೀಯ ಕೇಂದ್ರಗಳಲ್ಲಿ ಪ್ರಾರಂಭವಾಗಿತ್ತು.

ಕೋವ್ಯಾಕ್ಸಿನ್ ಅನ್ನು 28 ದಿನಗಳ ಅಂತರದಲ್ಲಿ ಎರಡು ಡೋಸ್ ನೀಡಲಾಗುತ್ತದೆ. ಲಸಿಕೆಯ ಪರಿಣಾಮಕಾರಿತ್ವವನ್ನು ಎರಡನೇ ಡೋಸ್ ನೀಡಿದ 14 ದಿನಗಳ ನಂತರ ಕಂಡುಹಿಡಿಯಬಹುದು ಎಂದು ಭಾರತ್ ಬಯೊಟೆಕ್ ಹೇಳಿದೆ.

**ಮತ್ತೊಂದು ತಾಲೀಮು ಕಾರ್ಯಾಚರಣೆ ಇಂದು:** ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಸಚಿವರು, ಪ್ರಧಾನ ಕಾರ್ಯದರ್ಶಿಗಳು ಮತ್ತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಜನವರಿ 8ರಂದು ನಡೆಯಲಿರುವ ಕೋವಿಡ್ ಲಸಿಕೆಯ ಎರಡನೇ ತಾಲೀಮು ಕಾರ್ಯಾಚರಣೆ ಮೇಲ್ವಿಚಾರಣೆ ನಡೆಸಬೇಕು ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಗುರುವಾರ ಮನವಿ ಮಾಡಿದ್ದಾರೆ.

33 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ 736 ಜಿಲ್ಲೆಗಳಲ್ಲಿ ಪೂರ್ವಾಭ್ಯಾಸ ನಡೆಯಲಿದೆ. ಈ ಸಂಬಂಧ ಹರ್ಷವರ್ಧನ್ ಅವರು ರಾಜ್ಯಗಳ ಸಿದ್ಧತೆ ಬಗ್ಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಪರಿಶೀಲನೆ ನಡೆಸಿದರು. ಡಿ.8ರಂದು ಅವರು ತಮಿಳುನಾಡಿಗೆ ಭೇಟಿ ನೀಡಿ, ಖುದ್ದಾಗಿ ವೀಕ್ಷಿಸಲಿದ್ದಾರೆ.

ಕನ್ನಡಪ್ರಭ

# ಬ್ರಿಟನ್ ರಿಟರ್ನ್ಡ್: ನಾಪತ್ತೆ ಆದವರ ಸಂಖ್ಯೆ 205ಕ್ಕೆ ಏರಿಕೆ

## ಬಿಬಿಎಂಪಿ ಮಾಹಿತಿ | ಪತ್ತೆ ಹಚ್ಚಲು ಪೊಲೀಸರ ನೆರವು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನಿಂದಬೆಂಗಳೂರುನಗರಕ್ಕೆಆಗಮಿಸಿದ ಪ್ರಯಾಣಿಕರ ಪೈಕಿ ನಾಪತ್ತೆ ಆಗಿರುವವರ ಸಂಖ್ಯೆ 205ಕ್ಕೆ ಏರಿಕೆಯಾಗಿದೆ. ಗುರುವಾರ ಹೊಸದಾಗಿ ಸೋಂಕು ಪತ್ತೆಯಾದ ವರದಿಯಾಗಿಲ್ಲ.



ಕಳೆದ ಡಿಸೆಂಬರ್‌ನಲ್ಲಿ ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಒಟ್ಟು 2,066 ಮಂದಿ ಆಗಮಿಸಿದ್ದಾರೆ. ಈ ಪೈಕಿ 1,861 ಮಂದಿ ಪತ್ತೆಯಾಗಿದ್ದಾರೆ. ಆದರೆ, ನಾಪತ್ತೆಯಾದವರ ಸಂಖ್ಯೆ ಮಾತ್ರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಕಳೆದ ಬುಧವಾರ 173 ಮಂದಿ ಮಾತ್ರ ನಾಪತ್ತೆಯಾಗಿದ್ದಾರೆ ಎಂದು ಬಿಬಿಎಂಪಿ ಮಾಹಿತಿ ನೀಡಿತ್ತು. ಆದರೆ, ಗುರುವಾರದ ವೇಳೆಗೆ ಈ ಸಂಖ್ಯೆ 205ಕ್ಕೆ ಏರಿಕೆಯಾಗಿದೆ ಎಂದು ಪಾಲಿಕೆ ಮಾಹಿತಿ ನೀಡಿದೆ. ನಾಪತ್ತೆಯಾದವರ ಮಾಹಿತಿಯನ್ನು ಪೊಲೀಸ್ ಇಲಾಖೆಗೆ ನೀಡಿ ಪತ್ತೆ ಮಾಡಿಕೊಡುವಂತೆ ಬಿಬಿಎಂಪಿ ಮನವಿ ಮಾಡಿಕೊಂಡಿದೆ.

ಈವರೆಗೆ ಬ್ರಿಟನ್‌ನಿಂದ ಆಗಮಿಸಿದವರಲ್ಲಿ 1,861 ಮಂದಿ ಪತ್ತೆಯಾಗಿದ್ದು, 1,755 ಮಂದಿಯನ್ನು ಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ. ಇನ್ನೂ 112 ಮಂದಿಯನ್ನು ಸೋಂಕು ಪರೀಕ್ಷೆಗೆ ಒಳಪಡಿಸಬೇಕಿದೆ. ಈವರೆಗೆ 27 ಮಂದಿಗೆ ಸೋಂಕು ಕಾಣಿಸಿಕೊಂಡಿದೆ. ಈ ಸೋಂಕಿತರೊಂದಿಗೆ ಸಂಪರ್ಕದಲ್ಲಿದ್ದ 16 ಮಂದಿ ಸೋಂಕು ದೃಢಪಟ್ಟಿದೆ. ಈ ಮೂಲಕ ಒಟ್ಟು 43 ಮಂದಿಗೆ ಸೋಂಕು ಕಾಣಿಸಿಕೊಂಡಿದೆ. ಗುರುವಾರ ಯಾವುದೇ ಸೋಂಕು ದೃಢಪಟ್ಟ ವರದಿಯಾಗಿಲ್ಲ. ಸೋಂಕಿತರೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿ ಇದ್ದ 80 ಮಂದಿ ಹಾಗೂ ಪರೋಕ್ಷ ಸಂಪರ್ಕದಲ್ಲಿ ಇದ್ದ 110 ಮಂದಿಯನ್ನು ಕ್ವಾರಂಟೈನ್ ಮಾಡಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಒಟ್ಟು 43 ಸೋಂಕು ಪ್ರಕರಣದಲ್ಲಿ ಬಿಬಿಎಂಪಿಯ ಮಹದೇವಪುರ ವಲಯದ ವ್ಯಾಪ್ತಿಯಲ್ಲಿ 19, ಬೊಮ್ಮನಹಳ್ಳಿಯಲ್ಲಿ 13, ಪೂರ್ವ ಮತ್ತು ಪಶ್ಚಿಮ ವಲಯದಲ್ಲಿ ತಲಾ 4, ದಾಸರಹಳ್ಳಿಯಲ್ಲಿ 2 ಹಾಗೂ ದಕ್ಷಿಣ ವಲಯದಲ್ಲಿ ಒಂದು ಪ್ರಕರಣ ಪತ್ತೆಯಾಗಿದೆ.

ಕನ್ನಡಪ್ರಭ

# 399 ಮಂದಿಗೆ ಸೋಂಕು

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಗುರುವಾರ 399 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 451 ಮಂದಿ ಗುಣಮುಖರಾಗಿದ್ದಾರೆ. ಐದು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,91,184ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,81,220ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 5,622ಕ್ಕೆ ಇಳಿಕೆಯಾಗಿದ್ದು, ಈ ಪೈಕಿ ಆರೋಗ್ಯ ಗಂಭೀರ ಸ್ಥಿತಿಯಲ್ಲಿರುವ 80 ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಗುರುವಾರ ಐದು ಮಂದಿ ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 4,341ಕ್ಕೆ ಏರಿಕೆಯಾಗಿದೆ.

# ರಾಜ್ಯದಲ್ಲಿಂದು ಬೃಹತ್ ಲಸಿಕೆ ತಾಲೀಮು

## ಕೊರೋನಾ ಲಸಿಕೆ ವಿತರಣೆಗೆ ಎಲ್ಲ ಜಿಲ್ಲೇಲಿ ಡ್ರೈರನ್ | ಜಿಲ್ಲಾಸ್ಪತ್ರೆ, ವೈದ್ಯಕೀಯ ಕಾಲೇಜು, ತಾಲೂಕು ಆಸ್ಪತ್ರೆಗಳು ಸಜ್ಜು

## ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಜತೆ ಸುಧಾಕರ್ ಸಭೆ | ಕೇಂದ್ರದಿಂದ 24 ಲಕ್ಷ ಸಿರಿಂಜ್ ರವಾನೆ: ಆರೋಗ್ಯ ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದೆಲ್ಲೆಡೆ ಶುಕ್ರವಾರ ನಡೆಯಲಿರುವ ಅತಿ ದೊಡ್ಡ ಲಸಿಕೆ ವಿತರಣೆಯ ತಾಲೀಮಿಗೆ ರಾಜ್ಯ ಆರೋಗ್ಯ ಇಲಾಖೆಯೂ ಸಜ್ಜಾಗಿದೆ. 30 ಜಿಲ್ಲೆಗಳಲ್ಲೂ ಏಕಕಾಲಕ್ಕೆ ಪ್ರತಿ ಜಿಲ್ಲೆಗೆ ಕನಿಷ್ಠ 7 ಆಸ್ಪತ್ರೆಗಳಂತೆ 263 ಕಡೆ ಶುಕ್ರವಾರ ಲಸಿಕೆ ತಾಲೀಮು ನಡೆಯಲಿದೆ.

ಜ.2ರಂದು ಮೊದಲ ಹಂತದ ಲಸಿಕಾ ತಾಲೀಮು ವೇಳೆ ಬೆಂಗಳೂರು, ಬೆಳಗಾವಿ, ಮೈಸೂರು, ಶಿವಮೊಗ್ಗ, ಕಲಬುರಗಿಯ ಒಟ್ಟು 16 ಆಸ್ಪತ್ರೆಗಳಲ್ಲಿ 125 ಮಂದಿಗೆ ಮಾತ್ರ ಲಸಿಕೆ ವಿತರಿಸುವ ಅಣಕು ಪ್ರದರ್ಶನ ಮಾಡಿ ತಾಲೀಮು ಮಾಡಲಾಗಿತ್ತು.

ಇದೀಗ ಕೇಂದ್ರದ ಸೂಚನೆಯಂತೆ ಶುಕ್ರವಾರ ಒಟ್ಟು 22 ಜಿಲ್ಲಾಸ್ಪತ್ರೆ, 20 ವೈದ್ಯಕೀಯ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 28 ಖಾಸಗಿ ಆಸ್ಪತ್ರೆಗಳಲ್ಲಿ ಡ್ರೈ ರನ್ ನಡೆಯಲಿದೆ.

ಈ ಬಗ್ಗೆ ಗುರುವಾರ ಕೇಂದ್ರ ಆರೋಗ್ಯ ಸಚಿವ



ಡಾ.ಹರ್ಷವರ್ಧನ್ ಎಲ್ಲಾ ರಾಜ್ಯಗಳ ಆರೋಗ್ಯ ಸಚಿವರೊಂದಿಗೆ ನಡೆಸಿದ ವಿಡಿಯೋ ಸಂವಾದದಲ್ಲಿ ರಾಜ್ಯ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಭಾಗವಹಿಸಿ ರಾಜ್ಯದ ಸಿದ್ಧತೆಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ರಾಜ್ಯಕ್ಕೆ ಕೇಂದ್ರ 24 ಲಕ್ಷ ಸಿರಿಂಜ್‌ಗಳನ್ನು ಕಳುಹಿಸಿದೆ. ಸಿಬ್ಬಂದಿಗೆ ತರಬೇತಿ ನೀಡಲಾಗಿದ್ದು, ಲಸಿಕೆ ವಿತರಣೆ ಜನಾಂದೋಲನ ರೀತಿ ಆಗಬೇಕು ಎಂಬ ದೃಷ್ಟಿಯಿಂದ ಸಿದ್ಧತೆ ಮಾಡಲಾಗಿದೆ ಎಂದರು.

**ಡ್ರೈರನ್ ನಡೆಯುವುದು ಹೇಗೆ?:** ನೈಜ ಲಸಿಕೆ ವಿತರಣೆ ಹೊರತು ಪಡಿಸಿ ಲಸಿಕೆ ವಿತರಣೆಯ ಉಳಿದೆಲ್ಲಾ ಪ್ರಕ್ರಿಯೆಗಳು ತಾಲೀಮಿನಲ್ಲಿ ಇರಲಿವೆ.

ಈ ವೇಳೆ ದಾಖಲೆ ಪರಿಶೀಲನೆ, ಲಸಿಕೆ ಸಂಗ್ರಹದ ವ್ಯವಸ್ಥೆ, ಸಂಗ್ರಹಗಾರದಿಂದ ಲಸಿಕೆ ಕೇಂದ್ರಕ್ಕೆ ಸಾಗಾಣಿಕೆ, ಕೇಂದ್ರದಲ್ಲಿ ಜನದಟ್ಟಣೆ ನಿಯಂತ್ರಣ ಮುಂತಾದವನ್ನು ಪರಿಶೀಲಿಸಲಾಗುತ್ತದೆ.

**ಸಿದ್ಧತೆ ಹೇಗಿರುತ್ತೆ?:** ಮುಖ್ಯ ಆರೋಗ್ಯಾಧಿಕಾರಿಗಳು, ವೈದ್ಯರು, ಲಸಿಕೆ ನೀಡುವ ಸಿಬ್ಬಂದಿ, ಶುಶ್ರೂಷಕರು, ಸಹಾಯಕ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಲಸಿಕಾ ಕೇಂದ್ರದಲ್ಲಿ ಇರುತ್ತಾರೆ. ಲಸಿಕಾ ಕೇಂದ್ರದಲ್ಲಿನ ಇಂಟರ್ನೆಟ್ ಸಂಪರ್ಕ, ವಿದ್ಯುತ್ ಲಭ್ಯತೆ, ಸುರಕ್ಷತೆಯನ್ನು ಗಮನಿಸಲಾಗುತ್ತದೆ. ಒಳ ಬರಲು ಮತ್ತು ಹೊರ ಹೋಗಲು ಪ್ರತ್ಯೇಕ ಬಾಗಿಲುಗಳಿರುವ ಮೂರು ಕೊಠಡಿಗಳ ವ್ಯವಸ್ಥೆ ಇರಲಿದೆ.

**ತಾಲೀಮು ಹೇಗೆ?:** ಲಸಿಕೆ ಪಡೆಯುವವರ ಯೂಸರ್ ಐಡಿ ರಚನೆ ಮತ್ತು ಲಸಿಕೆ ಪಡೆಯುವವರ ಮಾಹಿತಿ ಮೊದಲೇ ಸಿದ್ಧವಾಗಿದೆ. ಲಸಿಕೆ ಪಡೆಯುವಾತನ ಮಾಹಿತಿ ಕೋವಿನ್ ವೆಬ್‌ಸೈಟ್‌ಗೆ ಅಪ್‌ಲೋಡ್ ಆಗಲಿದೆ.

## 6.36 ಲಕ್ಷ ಮಂದಿ ನೋಂದಣಿ

### ಆರೋಗ್ಯ ಸಿಬ್ಬಂದಿಗೆ ಈಗಲೂ ನೋಂದಣಿಗೆ ಅವಕಾಶ: ಸುಧಾಕರ್

**ಬೆಂಗಳೂರು:** ರಾಜ್ಯದಲ್ಲಿ ಲಸಿಕೆ ವಿತರಣೆಗೆ ಸಂಬಂಧಿಸಿದ ಬಹುತೇಕ ಸಿದ್ಧತೆ ಪೂರ್ಣಗೊಂಡಿದ್ದು, ಮೊದಲ ಆದ್ಯತೆಯಾಗಿ ಕೊರೋನಾ ಲಸಿಕೆ ಹಾಕಿಸಿಕೊಳ್ಳಲು ರಾಜ್ಯದಲ್ಲಿ 6.36 ಲಕ್ಷ ಮಂದಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ 6.36 ಲಕ್ಷ ಮಂದಿ ಸಿಬ್ಬಂದಿ ಲಸಿಕೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಆರೋಗ್ಯ ಸಿಬ್ಬಂದಿಯಾಗಿರುವವರು ಇನ್ನೂ ನೋಂದಣಿ ಮಾಡಿಕೊಳ್ಳಬಹುದು. ಇನ್ನು ದೇಶಾದ್ಯಂತ ಮೊದಲ ಹಂತದಲ್ಲಿ ಒಟ್ಟು 1 ಕೋಟಿ ಲಸಿಕೆ ನೀಡಲಾಗುತ್ತದೆ ಎಂದರು.

**ಸಿದ್ಧತೆ ಪೂರ್ಣ:** ಲಸಿಕೆ ವಿತರಣೆಗೆ ಕೋಲ್ಡ್ ಚೇನ್ ಸಾಮಗ್ರಿಗಳು ಸಿದ್ಧವಾಗಿವೆ. ದೊಡ್ಡ ಕೊಠಡಿ ಗಾತ್ರದ 10 ವಾಕ್ ಇನ್ ಕೂಲರ್ಸ್, 4 ವಾಕ್ಯೂಮ್ ಫ್ರೀಜರ್, 3201 ಐಎಲ್ಆರ್ ರೆಫ್ರಿಜರೇಟರ್‌ಗಳು, 3039 ಡೀಪ್ ಫ್ರೀಜರ್‌ಗಳು, 3312 ಕೋಲ್ಡ್ ಬಾಕ್ಸ್‌ಗಳು, 46,591 ವ್ಯಾಕ್ಸಿನ್ ಕ್ಯಾರಿಯರ್‌ಗಳು, 2,25,749 ಐಸ್ ಪ್ಯಾಕ್‌ಗಳನ್ನು ಸಿದ್ಧ ಮಾಡಿಕೊಳ್ಳಲಾಗಿದೆ. ಹೀಗಾಗಿ ಲಸಿಕೆ ದಾಸ್ತಾನು ಹಾಗೂ ಸರಬರಾಜಿಗೆ ಯಾವುದೇ ಅಡಚಣೆ ಉಂಟಾಗುವುದಿಲ್ಲ ಎಂದು ತಿಳಿಸಿದರು.

ಕನ್ನಡಪ್ರಭ

# 8 ವಲಯಗಳ 8 ಕಡೆ ಡ್ರೈರನ್

## ವೈದ್ಯಕೀಯ ಕಾಲೇಜು, ಬಿಬಿಎಂಪಿ, ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ತಾಲೀಮು: ಬಿಬಿಎಂಪಿ ಆರೋಗ್ಯಾಧಿಕಾರಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಎರಡನೇ ಹಂತದ ಕೋವಿಡ್ ಲಸಿಕೆ ತಾಲೀಮು (ಡ್ರೈ ರನ್) ಶುಕ್ರವಾರ ಬೆಳಗ್ಗೆ 9 ಗಂಟೆಯಿಂದ 11 ಗಂಟೆವರೆಗೆ ಎಂಟು ಕಡೆ ನಡೆಯಲಿದೆ ಎಂದು ಬಿಬಿಎಂಪಿ ಸಾರ್ವಜನಿಕ ಆರೋಗ್ಯ ವಿಭಾಗದ ಮುಖ್ಯ ಆರೋಗ್ಯಾಧಿಕಾರಿ ವಿಜೇಂದ್ರ ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಆರೋಗ್ಯ ಇಲಾಖೆ ಸೂಚನೆಯಂತೆ ಶುಕ್ರವಾರ ಪಾಲಿಕೆಯ ಎಂಟು ವಲಯಗಳಲ್ಲಿ ತಲಾ ಒಂದು ಕಡೆ ತಾಲೀಮು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ರೆಫೆರಲ್ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ತಲಾ 25 ಆರೋಗ್ಯ ಸೇವಾ ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಸಲಾಗುವುದು ಎಂದು ತಿಳಿಸಿದರು.

ಕಳೆದ ಜ.3ರಂದು ಬಿಬಿಎಂಪಿ ಎರಡು ಕೇಂದ್ರಗಳಾದ ಕಾಮಾಕ್ಷಿಪಾಳ್ಯ ಮತ್ತು ವಿದ್ಯಾಪೀಠ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) ಗಳಲ್ಲಿ ಮಾತ್ರ ಕೋವಿಡ್ ಲಸಿಕೆಯ ಡ್ರೈರನ್ ನಡೆಸಲಾಗಿತ್ತು. ಈ ಬಾರಿ ಎರಡು ಮೆಡಿಕಲ್ ಕಾಲೇಜು, ಎರಡು ಖಾಸಗಿ ಆಸ್ಪತ್ರೆ, ಎರಡು ಬಿಬಿಎಂಪಿ ಆಸ್ಪತ್ರೆ ಹಾಗೂ ಎರಡು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ. ಡ್ರೈರನ್ ವೇಳೆ ಲಸಿಕೆ ಹಾಕುವುದನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಪ್ರಕ್ರಿಯೆಗಳನ್ನು ಸಹಜವಾಗಿಯೇ ನಡೆಸಲಾಗುವುದು. ಅಗತ್ಯ ಸಿಬ್ಬಂದಿ, ಕೊಠಡಿ, ವಾಹನ ವ್ಯವಸ್ಥೆ ಸೇರಿದಂತೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.




**ಡ್ರೈರನ್ ನಡೆಯುವ ಕೇಂದ್ರಗಳು**

| ವಲಯ | ಆಸ್ಪತ್ರೆ | ಬಿಬಿಎಂಪಿ/ ಖಾಸಗಿ/ಸರ್ಕಾರಿ |
|---|---|---|
| ಬೊಮ್ಮನಹಳ್ಳಿ | ಸಿಂಗಸಂದ್ರ (ಪಿಎಚ್‌ಸಿ) | ಬಿಬಿಎಂಪಿ |
| ಪೂರ್ವ | ಹಲಸೂರಿನ ರೆಫೆರಲ್ ಆಸ್ಪತ್ರೆ | ಬಿಬಿಎಂಪಿ |
| ಮಹದೇವಪುರ | ಕೆ.ಆರ್. ಪುರದ ಸಾರ್ವಜನಿಕ ಆಸ್ಪತ್ರೆ | ಸರ್ಕಾರಿ |
| ರಾಜರಾಜೇಶ್ವರಿನಗರ | ಕೆಂಗೇರಿಯ ಸಾರ್ವಜನಿಕ ಆರೋಗ್ಯ ಕೇಂದ್ರ | ಸರ್ಕಾರಿ |
| ಪಶ್ಚಿಮ | ಬೆಂಗಳೂರು ವೈದ್ಯಕೀಯ ಕಾಲೇಜು | ಸರ್ಕಾರಿ |
| ದಕ್ಷಿಣ | ಕಿಮ್ಸ್ ವೈದ್ಯಕೀಯ ಕಾಲೇಜು | ಖಾಸಗಿ |
| ದಾಸರಹಳ್ಳಿ | ಸಪ್ತಗಿರಿ ವೈದ್ಯಕೀಯ ಕಾಲೇಜು | ಖಾಸಗಿ |
| ಯಲಹಂಕ | ಆಸ್ಟರ್ ಸಿಎಂಐ ಆಸ್ಪತ್ರೆ | ಖಾಸಗಿ |

## ‘ಖಾಸಗಿ ಆಸ್ಪತ್ರೆ ವಿವರ ಕೊಡಿ’

**ಕೋ**ವಿಡ್ ಲಸಿಕೆ ಹಾಕುವುದಕ್ಕೆ ನಗರದಲ್ಲಿ ಸುಮಾರು 1,600 ಲಸಿಕೆ ವಿತರಣೆ ಕೇಂದ್ರ ಸ್ಥಾಪಿಸಲು ಬಿಬಿಎಂಪಿ, ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮತ್ತು ಮೆಡಿಕಲ್ ಕಾಲೇಜುಗಳನ್ನು ಬಳಸಿಕೊಳ್ಳಲಾಗುತ್ತಿದೆ. ಗುರುವಾರ ನಡೆದ ಬಿಬಿಎಂಪಿಯ ಎಲ್ಲ ವಲಯದ ಆರೋಗ್ಯಾಧಿಕಾರಿಗಳ ಸಭೆಯಲ್ಲಿ ಎಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಎಷ್ಟು ಲಸಿಕೆ ವಿತರಣೆ ಕೇಂದ್ರ ಆರಂಭಿಸಬಹುದು ಎಂದು ವರದಿ ನೀಡುವಂತೆ ಮುಖ್ಯ ಆರೋಗ್ಯಾಧಿಕಾರಿ ವಿಜೇಂದ್ರ ಸೂಚಿಸಿದ್ದಾರೆ.

ಕನ್ನಡಪ್ರಭ

# ರಾಜ್ಯಗಳಿಗೆ ಇಂದೇ ಲಸಿಕೆ?

## ಲಸಿಕೆ ಪಡೆಯಲು ಸಜ್ಜಾಗಿರಿ: ಕೇಂದ್ರ ಪತ್ರ
## ಲಸಿಕೆ ಹಂಚಿಕೆಗೆ ಪುಣೆಯೇ ಕೇಂದ್ರ ಸ್ಥಾನ
## 41 ಏರ್‌ಪೋರ್ಟ್‌ಗಳಿಗೆ ಮೊದಲು ಸಾಗಣೆ

• **ಪಿಟಿಐ** ನವದೆಹಲಿ

ದೇಶದಲ್ಲಿ ಸಂಕ್ರಾಂತಿ ವೇಳೆಗೆ ಕೊರೋನಾ ಲಸಿಕೆ ವಿತರಣೆ ಪ್ರಾರಂಭವಾಗಬಹುದು ಎಂಬ ನಿರೀಕ್ಷೆಗಳ ಸಂದರ್ಭದಲ್ಲೇ, ಸದ್ಯದಲ್ಲೇ ಕೊರೋನಾ ಲಸಿಕೆಯ ಮೊದಲ ಸರಕನ್ನು ಕಳುಹಿಸುತ್ತೇವೆ. ಅದನ್ನು ಪಡೆಯಲು ಸಜ್ಜಾಗಿರಿ ಎಂದು ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಪತ್ರ ಬರೆದಿದೆ.



ಮೂಲಗಳ ಪ್ರಕಾರ ಇಂಥದ್ದೊಂದು ರವಾನೆ ಪ್ರಕ್ರಿಯೆ ಶುಕ್ರವಾರದಿಂದಲೇ ಆರಂಭವಾಗುವ ಸಾಧ್ಯತೆ ಇದೆ.

ಈಗಾಗಲೇ ಕೋವಿಶೀಲ್ಡ್ ಲಸಿಕೆ ಉತ್ಪಾದಿಸಿ ಸಂಗ್ರಹ ಮಾಡಿಟ್ಟಿರುವ ಸೀರಂ ಇನ್‌ಸ್ಟಿಟ್ಯೂಟ್ ಇರುವ ಪುಣೆಯನ್ನು ಲಸಿಕೆ ಹಂಚಿಕೆಯ ಮುಖ್ಯ ಕೇಂದ್ರವಾಗಿ ಗುರುತಿಸಲಾಗಿದೆ. ಅಲ್ಲಿಂದ ನಾಗರಿಕ ಮತ್ತು ವಾಯುಪಡೆ ವಿಮಾನಗಳ ಮೂಲಕ ದೇಶದ ಇತರೆಡೆ ಇರುವ 41 ವಿಮಾನ ನಿಲ್ದಾಣಗಳಿಗೆ ತಲುಪಿಸಲಾಗುವುದು. ಉತ್ತರದ ಭಾಗಗಳಿಗೆ ದೆಹಲಿ ಮತ್ತು ಕರ್ನಾಲ್, ದಕ್ಷಿಣದ ರಾಜ್ಯಗಳಿಗೆ ಹೈದ್ರಾಬಾದ್ ಮತ್ತು ಚೆನ್ನೈ, ಪೂರ್ವದ ಭಾಗಗಳಿಗೆ ಕೋಲ್ಕತಾ ಮತ್ತು ಗುವಾಹಟಿ ಉಪ ಲಸಿಕೆ ವಿತರಣಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿವೆ.

**ರಾಜ್ಯಗಳಿಗೆ ಪತ್ರ:** ಕರ್ನಾಟಕ, ಆಂಧ್ರ ಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ದೆಹಲಿ, ಗುಜರಾತ್, ಹರ್ಯಾಣ, ಜಾರ್ಖಂಡ್, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಸ್ಥಾನ ಸೇರಿ 19 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಗುರುತಿಸಲಾದ ಸ್ಥಳಗಳಲ್ಲಿ ಲಸಿಕೆಯನ್ನು ಸರಬರಾಜುದಾರರೇ ಪೂರೈಸಲಿದ್ದಾರೆ.

↘ 11

### ದೇಶಾದ್ಯಂತ ಇಂದು ಬೃಹತ್ ತಾಲೀಮು

1 ಕೊರೋನಾ ಲಸಿಕೆ ವಿತರಣೆ ಕುರಿತು ಇಂದು ಮತ್ತೆ ಸಿದ್ಧತೆ ಪರಿಶೀಲನೆ

2 ದೇಶದ 736 ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದ ಅಣಕು ಕಾರ್ಯಾಚರಣೆ

3 33 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯಲಿದೆ ರಿಹರ್ಸಲ್

4 ರಾಜ್ಯಗಳ ಜತೆ ನಿನ್ನೆ ಸಭೆ ನಡೆಸಿದ ಆರೋಗ್ಯ ಸಚಿವ ಹರ್ಷವರ್ಧನ್

5 ಡಿ.28, ಜ.2ರ ಬಳಿಕ ನಡೆಯುತ್ತಿರುವ ಮೂರನೇ ಸುತ್ತಿನ ಕಾರ್ಯಾಚರಣೆ

7 ಸರ್ಕಾರಿ ಜತೆಗೆ ಖಾಸಗಿ ಆಸ್ಪತ್ರೆಗಳಲ್ಲೂ ನಡೆಯಲಿದೆ ಸಿದ್ಧತೆ ಪರಿಶೀಲನೆ

### ರಾಜ್ಯವೂ ಸಜ್ಜು

1 ರಾಜ್ಯ 30 ಜಿಲ್ಲೆಗಳಲ್ಲೂ ಇಂದು ಲಸಿಕೆ ವಿತರಣೆ ರಿಹರ್ಸಲ್

2 ಪ್ರತಿ ಜಿಲ್ಲೆಗೆ ಕನಿಷ್ಠ 7 ಆಸ್ಪತ್ರೆಯಂತೆ 264 ಕಡೆ ತಾಲೀಮು

3 22 ಜಿಲ್ಲಾಸ್ಪತ್ರೆ, 20 ವೈದ್ಯ ಕಾಲೇಜಿನಲ್ಲಿ ಡ್ರೈರನ್

4 43 ತಾಲೂಕು ಆಸ್ಪತ್ರೆಗಳಲ್ಲೂ ನಡೆಯಲಿದೆ ಕಾರ್ಯಾಚರಣೆ

VK
ವಿಜಯ ಕರ್ನಾಟಕ

## ಸಿದ್ಧತೆ ಪೂರ್ಣ, ಮೊದಲ ಹಂತದಲ್ಲಿ 6,35,986 ಮಂದಿಗೆ ಲಸಿಕೆ

# ಲಸಿಕೆ ನೀಡೋದಷ್ಟೇ ಬಾಕಿ

■ **ನಾಗಪ್ಪ ನಾಗನಾಯಕಹಳ್ಳಿ** ಬೆಂಗಳೂರು
nagappa.narayanappa@timesgroup.com

ರಾಜ್ಯಾದ್ಯಂತ ಮೊದಲ ಹಂತದಲ್ಲಿ 6,35,986 ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲು ಅಗತ್ಯ ಸಿದ್ಧತೆ ಪೂರ್ಣಗೊಂಡಿದೆ. ಲಸಿಕೆ ಸಂಗ್ರಹಕ್ಕೆ 3201 ಐಸ್‌ಲೈನ್ಡ್ ರೆಫ್ರಿಜರೇಟರ್‌ಗಳು (ಐಎಲ್‌ಆರ್) ಸಿದ್ಧವಾಗಿವೆ.

ಕೇಂದ್ರ ಸರಕಾರವು 64 ಬೃಹತ್ ಐಸ್ ಲೈನ್ಡ್ ರೆಫ್ರಿಜರೇಟರ್ ಮತ್ತು 24 ಲಕ್ಷ ಸಿರಿಂಜ್‌ಗಳನ್ನು ರವಾನಿಸಿದೆ. ಇವುಗಳನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೆ ತಲುಪಿಸಲಾಗಿದೆ. ಶೀಘ್ರದಲ್ಲೇ ಇನ್ನೂ 31 ಲಕ್ಷ ಸಿರಿಂಜ್‌ಗಳು ಬರಲಿವೆ. ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲು ಒಟ್ಟು 28,427 ಕೇಂದ್ರಗಳನ್ನು ಗುರುತಿಸಲಾಗಿದೆ. ಲಸಿಕೆ ಹಾಕುವ ಕಾರ್ಯಕ್ಕೆ 10,008 ಅನುಭವಿ ವ್ಯಾಕ್ಸಿನೇಟರ್ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

ಕೋವಿನ್ ಪೋರ್ಟಲ್‌ನಲ್ಲಿ ಜ. 6ರ ಬೆಳಗ್ಗೆ 9 ಗಂಟೆಯವರೆಗೆ 2,74,826 ಸರಕಾರಿ ಮತ್ತು 3,61,160 ಖಾಸಗಿ ಆರೋಗ್ಯ ಸಿಬ್ಬಂದಿಯ ಹೆಸರು ನೋಂದಾಯಿಸಲಾಗಿದೆ. ನೋಂದಣಿ ಪ್ರಕ್ರಿಯೆಯು ಡಿ. 1ರಿಂದ ಶುರುವಾಯಿತು. ಈಗಾಗಲೇ ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ ಮತ್ತು ಶಿವಮೊಗ್ಗದಲ್ಲಿ ನಡೆಸಿದ ಕೋವಿಡ್ ಲಸಿಕೆಯ ಪೂರ್ವಾಭ್ಯಾಸ (ಡ್ರೈ ರನ್) ಕಾರ್ಯಕ್ರಮವು ಯಶಸ್ವಿಯಾಗಿದೆ. »03


ಸಂಗ್ರಹ ಚಿತ್ರ

**ಲಸಿಕೆ ಪಡೆಯುವವರು (ಜ.6ರವರೆಗೆ)**

| ಸರಕಾರಿ ಸಿಬ್ಬಂದಿ | ಖಾಸಗಿ ಸಿಬ್ಬಂದಿ | ಒಟ್ಟು |
|---|---|---|
| 2,74,826 | 3,61,160 | 6,35,986 |

ರಾಜ್ಯದ 263 ಕಡೆ ಕೋವಿಡ್ ಲಸಿಕೆ ತಾಲೀಮು (ಡ್ರೈರನ್) ನಡೆಯಲಿದೆ. ಲಸಿಕೆ ಲಭ್ಯವಾದ ಬಳಿಕ ಇದನ್ನು ವಿತರಿಸುವ ಕಾರ್ಯವನ್ನು ಜನಾಂದೋಲನದ ರೂಪದಲ್ಲಿ ನಡೆಸಲಾಗುತ್ತದೆ.

**-ಡಾ. ಕೆ.ಸುಧಾಕರ್** ಆರೋಗ್ಯ ಮತ್ತು ವೈದ್ಯ ಶಿಕ್ಷಣ ಸಚಿವ

- ಅಗತ್ಯ ಸಿದ್ಧತೆಗೆ ಕೇಂದ್ರ ಸೂಚನೆ, ರಾಜ್ಯಗಳಿಗೆ ಇಂದು ಲಸಿಕೆ ರವಾನೆಯಾಗುವ ನಿರೀಕ್ಷೆ
- ಮೊದಲ ಹಂತದಲ್ಲಿ ಆದ್ಯತೆ ಮೇರೆಗೆ 30 ಕೋಟಿ ಫಲಾನುಭವಿಗಳಿಗೆ ಚುಚ್ಚುಮದ್ದು
- ಸದ್ಯದಲ್ಲೇ ಬರಲಿದೆ ಮೂಗಿನ ಮೂಲಕ ಪಡೆವ ಲಸಿಕೆ

VK
ವಿಜಯ ಕರ್ನಾಟಕ

# ಲಸಿಕೆ ನೀಡೋದೊಂದು ಬಾಕಿ

» ಮೊದಲ ಪುಟದಿಂದ

ತಾಲೀಮು ವೇಳೆ ಕಂಡುಬಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗಿದ್ದು, ಲಸಿಕೆ ವಿತರಣೆಗೆ ಎಲ್ಲ ರೀತಿಯ ತಯಾರಿ ಮಾಡಿಕೊಳ್ಳಲಾಗಿದೆ.

**ಕೋಲ್ಡ್ ಸ್ಟೋರೇಜ್ ಸಜ್ಜು**

ಲಸಿಕೆ ಸಂಗ್ರಹ ಮತ್ತು ವಿತರಣೆಗೆ ಅಗತ್ಯ ಮೂಲಸೌಕರ್ಯಗಳನ್ನು ಸಜ್ಜುಗೊಳಿಸಲಾಗಿದೆ. ಇದಕ್ಕಾಗಿ 2855 ಕೋಲ್ಡ್ ಸ್ಟೋರೇಜ್ ಕೇಂದ್ರಗಳು ಸಿದ್ಧವಾಗಿವೆ. ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಲಸಿಕಾ ಉಗ್ರಾಣಗಳಿವೆ. ಇದಲ್ಲದೇ ಬೆಂಗಳೂರು ನಗರ, ದಕ್ಷಿಣ ಕನ್ನಡ, ಬಾಗಲಕೋಟೆ, ಮೈಸೂರು, ಕಲಬುರಗಿಯಲ್ಲಿ ಪ್ರಾದೇಶಿಕ ಲಸಿಕೆ ಸಂಗ್ರಹ ಕೇಂದ್ರಗಳನ್ನು ಆರಂಭಿಸಲಾಗಿದೆ.

ರಾಜ್ಯದಲ್ಲಿ ಸದ್ಯ 10 ವಾಕ್ ಇನ್ ಕೂಲರ್ ಮತ್ತು 4 ವಾಕ್ ಇನ್ ಫ್ರೀಜರ್‌ಗಳಿವೆ. ಕೇಂದ್ರ ಆರೋಗ್ಯ ಸಚಿವಾಲಯವು 3 ವಾಕ್ ಇನ್ ಕೂಲರ್ ಮತ್ತು 2 ವಾಕ್ ಇನ್ ಫ್ರೀಜರ್‌ಗಳನ್ನು ನೀಡಲಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಕೊರೊನಾ ಸೇನಾನಿಗಳಿಗೆ ಕೋವಿಡ್ ಲಸಿಕೆ ನೀಡಲಾಗುತ್ತದೆ. ಪ್ರತಿಯೊಂದು ಕೇಂದ್ರದಲ್ಲಿ ಮೂರು ಕೊಠಡಿಗಳಿದ್ದು, ವ್ಯಾಕ್ಸಿನೇಟರ್ ಸೇರಿದಂತೆ ಐವರು ಕಾರ್ಯನಿರ್ವಹಿಸಲಿದ್ದಾರೆ. ಲಸಿಕೆ ಪಡೆದ ಸಿಬ್ಬಂದಿ 28 ದಿನಗಳ ಬಳಿಕ ಮತ್ತೊಂದು ಸಲ ಲಸಿಕೆ ಹಾಕಿಸಿಕೊಳ್ಳಬೇಕಿದೆ. ಎರಡನೇ ಹಂತದಲ್ಲಿ ಫ್ರಂಟ್ ಲೈನ್‌ನಲ್ಲಿರುವ ಕೊರೊನಾ ವಾರಿಯರ್‌ಗಳು, ಮೂರನೇ ಹಂತದಲ್ಲಿ 50 ವರ್ಷ ಮೀರಿದ ಸಾರ್ವಜನಿಕರಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿದೆ.

VK ವಿಜಯ ಕರ್ನಾಟಕ

### ವ್ಯಾಕ್ಸಿನ್ ವಿತರಣೆ ಜನಾಂದೋಲನದ ರೀತಿಯಲ್ಲಿ ನಡೆಯಬೇಕು: ಸಚಿವ ಸುಧಾಕರ್

# 263 ಕಡೆ ಇಂದು ಕೋವಿಡ್ ಲಸಿಕೆ ತಾಲೀಮು

**ಬೆಂಗಳೂರು:** ರಾಜ್ಯದ 263 ಕಡೆ ಕೋವಿಡ್ ಲಸಿಕೆ ತಾಲೀಮು (ಡ್ರೈರನ್) ನಡೆಯಲಿದೆ. ಲಸಿಕೆ ಲಭ್ಯವಾದ ಬಳಿಕ ಇದನ್ನು ವಿತರಿಸುವ ಕಾರ್ಯವನ್ನು ಜನಾಂದೋಲನದ ರೂಪದಲ್ಲಿ ನಡೆಸಬೇಕಾಗುತ್ತದೆ ಎಂದು ಆರೋಗ್ಯ ಮತ್ತು ವೈದ್ಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಹೇಳಿದ್ದಾರೆ.

ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಅವರೊಂದಿಗಿನ ವಿಡಿಯೊ ಸಂವಾದದ ಬಳಿಕ ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ''ಕೊರೊನಾ ಲಸಿಕೆಯ ವಿತರಣೆಗೆ ಸಿದ್ಧತೆ ಕುರಿತು ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಜತೆಗೆ ಕೇಂದ್ರದಿಂದ ಬೇಕಿರುವ ಸಹಕಾರದ ಬಗ್ಗೆಯೂ ಚರ್ಚೆಯಾಯಿತು. ಶುಕ್ರವಾರ (ಜ.8) ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 3 ಕಡೆ ಲಸಿಕೆ ವಿತರಣೆ ತಾಲೀಮು ನಡೆಯಬೇಕಿತ್ತು. ಆದರೆ, ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ 7 ವ್ಯವಸ್ಥೆಯಲ್ಲಿ ತಯಾರಿ ಮಾಡಿಕೊಂಡು 263 ಪ್ರದೇಶಗಳಲ್ಲಿ ಲಸಿಕೆಯ ವಿತರಣೆ ನಡೆಸಲಾಗುತ್ತಿದೆ. 24 ಜಿಲ್ಲಾಸ್ಪತ್ರೆ, 20 ಮೆಡಿಕಲ್ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 28 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ತಾಲೀಮು ನಡೆಯಲಿದೆ,'' ಎಂದು ತಿಳಿಸಿದರು.



ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರೊಂದಿಗಿನ ವಿಡಿಯೊ ಸಂವಾದದಲ್ಲಿ ಸಚಿವ ಸುಧಾಕರ್ ಅಧಿಕಾರಿಗಳೊಂದಿಗೆ ಭಾಗವಹಿಸಿದ್ದರು.

''ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 6.30 ಲಕ್ಷ ಸಿಬ್ಬಂದಿ ಲಸಿಕೆ ವಿತರಣೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನೂ ಕೂಡ ನೋಂದಣಿ ಮಾಡಿಸುವುದಾದರೆ ಬರಬಹುದು. 1 ಕೋಟಿ ಲಸಿಕೆಗಳನ್ನು ಕೇಂದ್ರ ಸರ್ಕಾರ ನಾನಾ ರಾಜ್ಯಗಳಿಗೆ ನೀಡಲಿದೆ. ಪೊಲೀಸರು, ಆರೋಗ್ಯ ಸಿಬ್ಬಂದಿ, ರಕ್ಷಣಾ ಸಿಬ್ಬಂದಿ, ಕೊರೊನಾ ನಿಯಂತ್ರಣದಲ್ಲಿ ಕಾರ್ಯ ಪ್ರವೃತ್ತರಾಗಿರುವವರಿಗೆ ಮೊದಲು ಲಸಿಕೆ ದೊರಕಲಿದೆ,'' ಎಂದು ತಿಳಿಸಿದರು. ಕೋವಿಡ್ ಲಸಿಕೆಯಿಂದ ಯಾವುದೇ ಅಪಾಯವಿಲ್ಲ, ಇದರಿಂದಾಗಿ ಜನರಿಗೆ ಅನುಕೂಲವಾಗುತ್ತದೆ. ಎಲ್ಲರೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ಸಚಿವರು ಮನವಿ ಮಾಡಿಕೊಂಡರು.

### ಜ.17ರಂದು ಪೋಲಿಯೊ ಹನಿ

ಜನವರಿ 17ರಂದು ರಾಜ್ಯಾದ್ಯಂತ ಪೋಲಿಯೊ ಹನಿ ನೀಡುವ ಕಾರ್ಯಕ್ರಮ ನಡೆಸಲಾಗುತ್ತಿದೆ. ಒಟ್ಟು 65 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ನೀಡುವ ಉದ್ದೇಶವಿದೆ ಎಂದು ಸಚಿವರು ತಿಳಿಸಿದರು.

### ಹಕ್ಕಿ ಜ್ವರದ ಭಯ ಬೇಡ

ಹಕ್ಕಿ ಜ್ವರದ ಬಗ್ಗೆ ಭಯ ಅಗತ್ಯವಿಲ್ಲ. ದಕ್ಷಿಣ ಕನ್ನಡದಲ್ಲಿ 6 ಕಾಗೆಗಳು ಸಾವನ್ನಪ್ಪಿದ್ದು, ಪರೀಕ್ಷೆಗೆ ಒಳಪಡಿಸಲಾಗಿದೆ. ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುತ್ತಿರುವ ಸಂದರ್ಭದಲ್ಲಿ ಕೊರೊನಾ ಇನ್ನಿತರ ರೋಗಗಳ ಬಗ್ಗೆ ಭೀತಿ ಮೂಡಿಸಬಾರದು. ಸರಕಾರ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ ಎಂದು ಸಚಿವ ಸುಧಾಕರ್ ಭರವಸೆ ನೀಡಿದರು.

ವಿಜಯ ಕರ್ನಾಟಕ

# 8 ವಲಯಗಳಲ್ಲಿ ಇಂದು ಕೋವಿಡ್ ಲಸಿಕೆ ತಾಲೀಮು

**ನಗರದ ನಾನಾ ಕಡೆ 2ನೇ ಹಂತದ ಡ್ರೈರನ್**

■ ವಿಕ ಸುದ್ದಿಲೋಕ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯ 8 ವಲಯಗಳಲ್ಲಿನ ಸಾರ್ವಜನಿಕ ಆರೋಗ್ಯ ಕೇಂದ್ರ, ರೆಫರಲ್ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಶುಕ್ರವಾರ ಬೆಳಗ್ಗೆ 9 ರಿಂದ 11 ಗಂಟೆಯವರೆಗೆ ಕೋವಿಡ್ ಲಸಿಕೆ ಪೂರ್ವಾಭ್ಯಾಸ (ಡ್ರೈ ರನ್) ನಡೆಯಲಿದೆ.

ಕೋವಿನ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಲ್ಪಟ್ಟ ಆರೋಗ್ಯ ಕಾರ್ಯಕರ್ತರು ಕೊರೊನಾ ಲಸಿಕೆಯ ತಾಲೀಮು ಕಾರ್ಯಾಚರಣೆಯಲ್ಲಿ ಭಾಗವಹಿಸಲಿದ್ದಾರೆ. ಜ. 2ರಂದು ವಿದ್ಯಾಪೀಠ, ಕಾಮಾಕ್ಷಿಪಾಳ್ಯ, ಯಲಹಂಕ ಮತ್ತು ಆನೇಕಲ್ ಬಳಿಯ ಹಾರಗದ್ದೆಯಲ್ಲಿನ ಆರೋಗ್ಯ ಕೇಂದ್ರದಲ್ಲಿ ನಡೆಸಿದ ಡ್ರೈ ರನ್ ಯಶಸ್ವಿಯಾಗಿತ್ತು.

ಪ್ರತಿಯೊಂದು ಆರೋಗ್ಯ ಕೇಂದ್ರದಲ್ಲಿ ತಲಾ 25 ಮಂದಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ಅಣಕು ತಾಲೀಮು ಎರಡು ತಾಸುಗಳ ಕಾಲ ನಡೆಯಲಿದೆ.

ಬೊಮ್ಮನಹಳ್ಳಿ ವಲಯದ ಸಿಂಗಸಂದ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ದಾಸರಹಳ್ಳಿಯ ಸಪ್ತಗಿರಿ ವೈದ್ಯಕೀಯ ಕಾಲೇಜು, ಪೂರ್ವ ವಲಯದ ಹಲಸೂರು ರೆಫರಲ್ ಆಸ್ಪತ್ರೆ, ಮಹದೇವಪುರದ ಕೆ.ಆರ್.ಪುರಂ ಸಾರ್ವಜನಿಕ ಆಸ್ಪತ್ರೆ, ರಾಜೇಶ್ವರಿನಗರದ ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರ, ದಕ್ಷಿಣ ವಲಯದ ಕಿಮ್ಸ್ ವೈದ್ಯಕೀಯ ಕಾಲೇಜು, ಪಶ್ಚಿಮ ವಲಯದ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಯಲಹಂಕದ ಆ್ಯಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಲಸಿಕೆ ತಾಲೀಮು ನಡೆಯಲಿದೆ.

VK
ವಿಜಯ ಕರ್ನಾಟಕ

# ಬಿಬಿಎಂಪಿ ಗುತ್ತಿಗೆದಾರ ಆತ್ಮಹತ್ಯೆ

**ಬೆಂಗಳೂರು:** ಬಿಬಿಎಂಪಿ ಕ್ಲಾಸ್ ಒನ್ ಗುತ್ತಿಗೆದಾರ ವಿ.ಕೃಷ್ಣಂ (68) ಮಹಾಲಕ್ಷ್ಮಿ ಲೇಔಟ್‌ನಲ್ಲಿ ತಾವೇ ಗುತ್ತಿಗೆದಾರರಾಗಿ ಕಾಮಗಾರಿ ನಡೆಸುತ್ತಿದ್ದ ಡಾ. ರಾಜ್‌ಕುಮಾರ್ ಒಳಾಂಗಣ



ಕ್ರೀಡಾಂಗಣದ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವೈಯ್ಯಾಲಿಕಾವಲ್‌ನ ಕೋದಂಡ ರಾಮಪುರ ನಿವಾಸಿಯಾಗಿರುವ ವಿ.ಕೃಷ್ಣಂ, ಬುಧವಾರ ಸಂಜೆ ನಿರ್ಮಾಣ ಹಂತದ ಕ್ರೀಡಾಂಗಣದೊಳಗಿನ ಕಚೇರಿಯಲ್ಲಿ ಬಾಗಿಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಚೇರಿಯಿಂದ ಹೊರ ಬಾರದ ಕಾರಣ ಅನುಮಾನಗೊಂಡು ನೋಡಿದಾಗ ನೇಣು ಹಾಕಿಕೊಂಡಿರುವುದು ಗೊತ್ತಾಗಿದೆ. ಪೊಲೀಸರು ಬಾಗಿಲು ಮುರಿದು ಒಳ ಪ್ರವೇಶಿಸಿದ್ದಾರೆ.

ಆತ್ಮಹತ್ಯೆಗೆ ನಿಖರ ಕಾರಣ ಗೊತ್ತಾಗಿಲ್ಲ. ಆದರೆ, ಕೆಲ ಕಾಮಗಾರಿಗಳ ಬಾಕಿ ಬಿಲ್ ಬರಬೇಕಾಗಿತ್ತು ಎಂದು ಕೃಷ್ಣಂ ಅವರ ಮ್ಯಾನೇಜರ್ ತಿಳಿಸಿದ್ದಾರೆ. ಕೇಸ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮಹಾಲಕ್ಷ್ಮಿ ಲೇಔಟ್ ಠಾಣೆ ಅಧಿಕಾರಿ ತಿಳಿಸಿದರು.

VK
ವಿಜಯ ಕರ್ನಾಟಕ

# 399 ಮಂದಿಗೆ ಕೊರೊನಾ ಸೋಂಕು




■ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಗುರುವಾರ ಹೊಸದಾಗಿ 399 ಮಂದಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ. ಕೋವಿಡ್‌ಗೆ ಐದು ಮಂದಿ ಬಲಿಯಾಗಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಈವರೆಗೆ 3,91,184 ಸೋಂಕಿತ ಪ್ರಕರಣಗಳು ಪತ್ತೆಯಾಗಿದ್ದು, ಈ ಪೈಕಿ 3,81,220 ಚೇತರಿಸಿಕೊಂಡಿದ್ದಾರೆ. ಉಳಿದ 5622 ರೋಗಿಗಳು ನಿಗದಿತ ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕು ಪೀಡಿತರಾಗಿದ್ದ 4341 ಮಂದಿ ಮೃತಪಟ್ಟಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

# ಗುತ್ತಿಗೆದಾರ ನೇಣಿಗೆ ಶರಣು

**ಬೆಂಗಳೂರು:** ಬಿಬಿಎಂಪಿ ವಹಿಸಿದ್ದ ಕಾಮಗಾರಿ ಪೂರ್ಣಗೊಳಿಸಿದರೂ ಹಣ ಬಿಡುಗಡೆ ವಿಳಂಬವಾದ ಹಿನ್ನೆಲೆಯಲ್ಲಿ ಗುತ್ತಿಗೆದಾರ ನಾಗಪುರ ವಾರ್ಡ್‌ನಲ್ಲಿ ತಾವು ನಿರ್ಮಿಸಿದ್ದ ಡಾ. ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೈಯಾಲಿಕಾವಲ್ ನಿವಾಸಿ ವನ್ನಿಕೃಷ್ಣ (56) ಮೃತ. ಪಾಲಿಕೆಯ ಡಾ.ರಾಜ್‌ಕುಮಾರ್ ಒಳಾಂಗಣ ಸ್ಟೇಡಿಯಂನ ಕಿಟಕಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಗುರುವಾರ ಶವ ಪತ್ತೆಯಾಗಿದೆ. ಹಲವು ವರ್ಷಗಳಿಂದ ಕಟ್ಟಡ ನಿರ್ಮಾಣ ಗುತ್ತಿಗೆದಾರರಾಗಿರುವ ವನ್ನಿಕೃಷ್ಣ, ಹಲವು ಪಾಲಿಕೆ ಕಾಮಗಾರಿಗಳನ್ನು ನಡೆಸಿದ್ದಾರೆ. 2017ರಿಂದ 5 ಕೋಟಿ ರೂ.ಗೂ ಅಧಿಕ ಕಾಮಗಾರಿಗಳನ್ನು ಮಾಡಿದ್ದು, ಈ ಪೈಕಿ 2 ಕೋಟಿ ರೂ. ಮಾತ್ರ ಬಿಡುಗಡೆಯಾಗಿದೆ. ಬಾಕಿ 3 ಕೋಟಿ ರೂ.ಗಳಲ್ಲಿ 1.6 ಕೋಟಿ ರೂ. ಬಿಲ್ ಆಗಿದ್ದರೂ ಹಣ ಬಿಡುಗಡೆ ಆಗಿರಲಿಲ್ಲ ಎನ್ನಲಾಗಿದೆ.



ಹಲವು ಪಾಲಿಕೆ ಗುತ್ತಿಗೆದಾರರ ಹೆಸರಿನಲ್ಲಿ ವನ್ನಿಕೃಷ್ಣ ಕಾಮಗಾರಿ ನಡೆಸುತ್ತಿದ್ದರು. ಎರಡೂವರೆ ವರ್ಷಗಳಿಂದ ಕಾಮಗಾರಿಗೆ ಬಿಲ್ ಪಾವತಿಯಾಗದ ಹಿನ್ನೆಲೆಯಲ್ಲಿ ಸಾಲ ಹೆಚ್ಚಳವಾಗಿ ಸಾವಿಗೆ ಶರಣಾಗಿರಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಗುತ್ತಿಗೆದಾರರಿಗೆ ಸಂಕಷ್ಟ

**ಕೋವಿಡ್‌ನಿಂದ ಆರ್ಥಿಕ ಸಂಕಷ್ಟದಲ್ಲಿರುವ ಬಿಬಿಎಂಪಿಗೆ ಆಡಳಿತ ನಿರ್ವಹಣೆ, ವೇತನ ಪಾವತಿ ಬಿಟ್ಟರೆ ಬೇರ‍್ಯಾವ ಕಾಮಗಾರಿ ನಿರ್ಮಾಣ ಅಥವಾ ಗುತ್ತಿಗೆದಾರರ ಬಿಲ್ ಪಾವತಿಗೆ ಹಣವಿಲ್ಲದಂತಾಗಿದೆ. 2018ರಿಂದ ಈವರೆಗೆ 2,700 ಕೋಟಿ ರೂ. ಗೂ ಅಧಿಕ ಮೊತ್ತದ ಗುತ್ತಿಗೆ ಬಿಲ್ ಮೊತ್ತ ಬಾಕಿ ಉಳಿಸಿ ಕೊಂಡಿದೆ. ಇದರಿಂದ 2 ಸಾವಿರ ಗುತ್ತಿಗೆದಾರರಿಗೆ ತೀವ್ರ ಸಂಕಷ್ಟ ಎದುರಾಗಿದೆ.**

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

## 19 ರಾಜ್ಯಗಳಿಗೆ ಮೊದಲ ಹಂತದಲ್ಲಿ ಪೂರೈಕೆ | ಸಿದ್ಧತೆಗೆ ಕೇಂದ್ರ ಸೂಚನೆ

# ವಾರದಲ್ಲಿ ರಾಜ್ಯಕ್ಕೆ ಲಸಿಕೆ?

**ನವದೆಹಲಿ:** ಕರೊನಾ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕಕ್ಕೆ ತುರ್ತು ಬಳಕೆಗಾಗಿ ಕೋವಿಡ್ ಲಸಿಕೆ ಮೊದಲ ಕಂತಿನಲ್ಲೇ ಲಭ್ಯವಾಗಲಿದೆ. ಹೌದು, ಕರ್ನಾಟಕ ಸಹಿತ 19 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳನ್ನು ಮೊದಲ ಹಂತದ ಲಸಿಕೆ ವಿತರಣೆಗೆ ಗುರುತಿಸಲಾಗಿದ್ದು, ಇನ್ನೊಂದು ವಾರದಲ್ಲಿ ಲಸಿಕೆ ತಲುಪಲಿದೆ. ಲಸಿಕೆ ಅಭಿಯಾನಕ್ಕೆ ಸನ್ನದ್ಧವಾಗಿರುವಂತೆ ಈ ರಾಜ್ಯಗಳಿಗೆ ಈಗಾಗಲೇ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಮೊದಲ ಹಂತದಲ್ಲಿ ಲಸಿಕೆಯನ್ನು ಶೀಘ್ರವೇ ಸರಬರಾಜು ಮಾಡಲಾಗುವುದು. ಪೂರಕ ಸಿದ್ಧತೆ ಮಾಡಿಕೊಳ್ಳುವಂತೆ ಆರೋಗ್ಯ ಸಚಿವಾಲಯದ ಪುನರುತ್ಪಾದನೆ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ವಿಭಾಗದ ಸಲಹೆಗಾರ ಡಾ. ಪ್ರದೀಪ್ ಹಲ್ದರ್ ಜ. 5ರ ಪತ್ರದಲ್ಲಿ ಸೂಚಿಸಿದ್ದಾರೆ. ಫಲಾನುಭವಿಗಳ ನೋಂದಣಿಯ ಆಧಾರದಲ್ಲಿ ಲಸಿಕೆಯನ್ನು ಜಿಲ್ಲೆಗಳಿಗೆ ರವಾನಿಸಲಾಗುತ್ತದೆ.

**ಯಾವ್ಯಾವ ಲಸಿಕೆ?**
- ಕೋವಿಶೀಲ್ಡ್
- ಕೊವ್ಯಾಕ್ಸಿನ್

**ಶೀಘ್ರ ಮೋದಿ ಘೋಷಣೆ:** ಲಸಿಕೆ ವಿತರಣೆ ಪೂರ್ವಾಭ್ಯಾಸದಲ್ಲಿ ತೊಡಗಿರುವ ರಾಜ್ಯಗಳಿಗೆ ಸಾಮೂಹಿಕ ಬಳಕೆಗೆ ಲಸಿಕೆ ಯಾವಾಗ ಸಿಗಬಹುದೆಂಬ ಕುತೂಹಲ ಇದೆ. ಗುರುವಾರ ಕೇಂದ್ರ ಆರೋಗ್ಯ ಸಚಿವರೊಂದಿಗೆ ನಡೆದ ವಿಡಿಯೋ ಸಂವಾದದಲ್ಲೂ ಹಲವು ರಾಜ್ಯಗಳು ಲಸಿಕೆ ಯಾವಾಗ ಕೈ ಸೇರಬಹುದೆಂಬ ಪ್ರಶ್ನೆ ಎತ್ತಿದ್ದವು. ಆದರೆ, ಶೀಘ್ರ ಎಂದಷ್ಟೇ ಸಚಿವರಿಂದ ಉತ್ತರ ಬಂದಿತ್ತು. ವಿಜಯವಾಣಿಗೆ ಲಭ್ಯವಾದ ಮಾಹಿತಿ ಪ್ರಕಾರ ಸಂಕ್ರಾಂತಿ ವೇಳೆಗೆ ಪ್ರಧಾನಿಯವರೇ ದಿನಾಂಕ ಘೋಷಿಸಲಿದ್ದಾರೆ. ಪುಟ 2



ಕರೊನಾ ಲಸಿಕೆ ತಾಲೀಮಿಗೆ ಮುಂಬೈನಲ್ಲಿ ಸಿದ್ಧತೆ.

## ಮೊದಲು ಯಾರಿಗೆ?

ಮೊದಲ ಹಂತದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ದೆಹಲಿ, ಗುಜರಾತ್, ಹರಿಯಾಣ, ಜಾರ್ಖಂಡ್, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳಕ್ಕೆ ಲಸಿಕೆ ಪೂರೈಕೆಯಾಗಲಿದೆ. ಉಳಿದ 18 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ ಆಯಾ ಸರ್ಕಾರಗಳಿಂದಲೇ ಲಸಿಕೆ ಸರಬರಾಜು ಆಗಲಿದೆ.

## ಕೋಟಿ ದಾಟಿದ ಚೇತರಿಕೆ

### ವಿಶ್ವದಲ್ಲೇ ಭಾರತ ಮುಂಚೂಣಿ

...ಪುಟ-10...

## ಇಂದು 2ನೇ ತಾಲೀಮು

**ಬೆಂಗಳೂರು/ನವದೆಹಲಿ:** ಲಸಿಕೆ ಅಭಿಯಾನದ ಯಶಸ್ಸಿಗೆ ಪೂರ್ವಭಾವಿಯಾಗಿ ಶುಕ್ರವಾರ ಉತ್ತರ ಪ್ರದೇಶ ಮತ್ತು ಹರಿಯಾಣ ಹೊರತುಪಡಿಸಿ ದೇಶದ ಉಳಿದೆಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇನ್ನೊಂದು ಸುತ್ತಿನ ತಾಲೀಮು ನಡೆಯಲಿದೆ. ಕರೊನಾ ಲಸಿಕೆ ವಿತರಣೆಯನ್ನು ವ್ಯವಸ್ಥಿತವಾಗಿ ನೆರವೇರಿಸುವ ಉದ್ದೇಶದಿಂದ ಶುಕ್ರವಾರ ರಾಜ್ಯದ 263 ಕಡೆ ತಾಲೀಮು ನಡೆಸಲಾಗುತ್ತದೆ. ಈ ತಾಲೀಮಿನ ಪೂರ್ವ ತಯಾರಿ ಕುರಿತಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರೊಂದಿಗಿನ ಸಭೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು. ಪುಟ 2



## ಪುಣೆಯಿಂದ ದೆಹಲಿಗೆ ಲಸಿಕೆ

ಗುರುವಾರ ಪುಣೆಯಿಂದ ದೆಹಲಿಗೆ ಕೋವಿಶೀಲ್ಡ್ ಲಸಿಕೆಯ ಮೊದಲ ಸಾಗಣೆ ಪ್ರಕ್ರಿಯೆ ನಡೆದಿದೆ. ಏರ್ ಇಂಡಿಯಾದ ಎಐ-850 ವಿಮಾನ ಲಸಿಕೆ ಸಾಗಿಸಿದೆ. ಲಸಿಕೆ ಇಡುವುದಕ್ಕಾಗಿಯೇ ದೆಹಲಿಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ.

Bengaluru Edition
Jan 8, 2021 Page No. 1
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ

# ಕೋವಿಡ್‌ಗೆ ನಗರದಲ್ಲಿ 5 ಮಂದಿ ಬಲಿ

**ಬೆಂಗಳೂರು:** ರಾಜಧಾನಿಯಲ್ಲಿ ಗುರುವಾರ 399 ಹೊಸ ಕೋವಿಡ್ ಪ್ರಕರಣ ಪತ್ತೆಯಾಗಿದ್ದು, 451 ಮಂದಿ ಗುಣಮುಖರಾಗಿದ್ದಾರೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,91,184 ಏರಿಕೆಯಾಗಿದ್ದು, 3,81,220 ಮಂದಿ ಗುಣಮುಖರಾಗಿದ್ದಾರೆ. ನಗರದಲ್ಲಿ 5,622 ಸಕ್ರಿಯ ಪ್ರಕರಣಗಳಿದ್ದು, 80 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುರುವಾರ ಐವರು ಸೋಂಕಿಗೆ ಬಲಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,341ಕ್ಕೆ ತಲುಪಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

Bengaluru Edition
Jan 8, 2021 Page No. 2
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ
ನಂ.1
ಕನ್ನಡ ದಿನಪತ್ರಿಕೆ

# ಇಂದೂ ಲಸಿಕೆ ತಾಲೀಮು

## 8 ಆಸ್ಪತ್ರೆಗಳಲ್ಲಿ ಆಯೋಜನೆ | ಆರೋಗ್ಯ ಕಾರ್ಯಕರ್ತರಿಗೆ ತರಬೇತಿ

**ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ಎರಡನೇ ಬಾರಿಗೆ ಶುಕ್ರವಾರ (ಜ.8) ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರ, ರೆಫರಲ್ ಆಸ್ಪತ್ರೆ, ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ಸೇರಿ ಎಂಟು ಆಸ್ಪತ್ರೆಗಳಲ್ಲಿ ಬೆಳಗ್ಗೆ 9ರಿಂದ 11 ಗಂಟೆವರೆಗೆ ಕರೊನಾ ಲಸಿಕೆ ತಾಲೀಮು ನಡೆಸಲಾಗುತ್ತಿದೆ.

» **8 ವಲಯಗಳಲ್ಲಿ ತಲಾ ಒಂದು ಕಡೆ ಸಿದ್ಧತೆ**

» **ಆಸ್ಪತ್ರೆಗಳಲ್ಲಿ ಮಾತ್ರ ಕೋವಿಡ್ ಲಸಿಕೆ ವಿತರಣಾ ಕೇಂದ್ರ**

ಪಾಲಿಕೆ ವ್ಯಾಪ್ತಿಯಲ್ಲಿ ಜ.3ರಂದು ಕಾಮಾಕ್ಷಿಪಾಳ್ಯ ಮತ್ತು ವಿದ್ಯಾಪೀಠ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (ಪಿಎಚ್‌ಸಿ) ಕೋವಿಡ್ ಲಸಿಕೆ ವಿತರಣೆ ತಾಲೀಮು ನಡೆಸಲಾಗಿತ್ತು. ಈಗ ಕೇಂದ್ರ ಸರ್ಕಾರದ ಸೂಚನೆ ಮೇರೆಗೆ 2ನೇ ಬಾರಿ ಪಾಲಿಕೆಯ 8 ವಲಯಗಳಲ್ಲಿ ತಲಾ ಒಂದು ಕಡೆ ತಾಲೀಮು ಕೈಗೊಳ್ಳಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ತಲಾ 25 ಆರೋಗ್ಯ ಸೇವಾ ಕಾರ್ಯಕರ್ತರಿಗೆ ಲಸಿಕೆ ಹೇಗೆ ನೀಡಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗುವುದು ಎಂದು ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ. ವಿಜೇಂದ್ರ ತಿಳಿಸಿದ್ದಾರೆ.

**ಆಸ್ಪತ್ರೆ ವಿವರ ಕೊಡಿ:** ಕೇಂದ್ರ ಸರ್ಕಾರದ ಸೂಚನೆಯಂತೆ ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳನ್ನು ಬಿಟ್ಟು ಆಸ್ಪತ್ರೆಗಳಲ್ಲಿ ಮಾತ್ರ ಕೋವಿಡ್ ಲಸಿಕೆ ವಿತರಣಾ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ನಗರದಲ್ಲಿ 1,600 ಲಸಿಕೆ ವಿತರಣೆ ಕೇಂದ್ರ ಸ್ಥಾಪಿಸಲು ಬಿಬಿಎಂಪಿ, ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮತ್ತು ಮೆಡಿಕಲ್ ಕಾಲೇಜುಗಳನ್ನು ಬಳಸಿಕೊಳ್ಳಲಾಗುತ್ತಿದೆ. ಹೀಗಾಗಿ, ಎಲ್ಲ ವಲಯದ ಆರೋಗ್ಯಾಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದ್ದು, ಎಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಎಷ್ಟು ಲಸಿಕೆ ವಿತರಣಾ ಕೇಂದ್ರ ಆರಂಭಿಸಬಹುದು ಎಂದು ವರದಿ ನೀಡುವಂತೆ ಸೂಚಿಸಲಾಗಿದೆ.




### ಎಲ್ಲೆಲ್ಲಿ ನಡೆಯಲಿದೆ ತಾಲೀಮು?

| ವಲಯಗಳು | ಆಸ್ಪತ್ರೆ ಹೆಸರು |
|---|---|
| ಬೊಮ್ಮನಹಳ್ಳಿ | ಪ್ರಾಥಮಿಕ ಆರೋಗ್ಯ ಕೇಂದ್ರ, ಸಿಂಗಸಂದ್ರ |
| ಪೂರ್ವ | ರೆಫರಲ್ ಆಸ್ಪತ್ರೆ, ಹಲಸೂರು |
| ಮಹದೇವಪುರ | ಸಾರ್ವಜನಿಕ ಆಸ್ಪತ್ರೆ, ಕೆ.ಆರ್. ಪುರ |
| ರಾಜೇಶ್ವರಿನಗರ | ಸಾರ್ವಜನಿಕ ಆರೋಗ್ಯ ಕೇಂದ್ರ, ಕೆಂಗೇರಿ |
| ಪಶ್ಚಿಮ | ಬೆಂಗಳೂರು ವೈದ್ಯಕೀಯ ಕಾಲೇಜು, ಕೆ.ಆರ್. ರಸ್ತೆ |
| ದಕ್ಷಿಣ | ಕಿಮ್ಸ್ ವೈದ್ಯಕೀಯ ಕಾಲೇಜು, ಕೆ.ಆರ್. ರಸ್ತೆ |
| ದಾಸರಹಳ್ಳಿ | ಸಪ್ತಗಿರಿ ವೈದ್ಯಕೀಯ ಕಾಲೇಜು, ಹೆಸರಘಟ್ಟ ಮುಖ್ಯರಸ್ತೆ |
| ಯಲಹಂಕ | ಆ್ಯಸ್ಟರ್ ಸಿಎಂಐ ಆಸ್ಪತ್ರೆ, ಸಹಕಾರನಗರ |

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

ಗುಣಮುಖರ ಪ್ರಮಾಣ ಶೇಕಡ 96.36ಕ್ಕೆ ಏರಿಕೆ | ವಿಶ್ವದಲ್ಲೇ ಅತ್ಯಧಿಕ

# ಕೋಟಿ ದಾಟಿದ ಕರೊನಾ ಚೇತರಿಕೆ ಪ್ರಮಾಣ

**ನವದೆಹಲಿ:** ಭಾರತದಲ್ಲಿ ಕರೊನಾ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ ಗುರುವಾರ ಒಂದು ಕೋಟಿಯ ಗಡಿ ದಾಟಿದೆ. ಗುರುವಾರ 19,587 ಕೋವಿಡ್-19 ರೋಗಿಗಳು ಗುಣಮುಖರಾಗಿದ್ದು, ಗುಣಮುಖರ ಒಟ್ಟು ಸಂಖ್ಯೆ 1,00,32,962ಕ್ಕೆ ಏರಿದೆ. ಇದು ದೇಶದಲ್ಲಿ ಸಕ್ರಿಯ ಸೋಂಕು ಪ್ರಕರಣಕ್ಕಿಂತ 44 ಪಟ್ಟು ಹೆಚ್ಚಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ರಾಷ್ಟ್ರೀಯ ಚೇತರಿಕೆ ದರ ಶೇಕಡ 96.36 ತಲುಪಿದೆ. ಭಾರತದ ಚೇತರಿಕೆ ಪ್ರಮಾಣ ಇಡೀ ಜಗತ್ತಿನಲ್ಲೇ ಹೆಚ್ಚಿನದ್ದಾಗಿದೆ. ಸೋಂಕಿನ ಒಟ್ಟು ಪ್ರಕರಣದ ಶೇಕಡ 2.19 ಅಂದರೆ 2,28,083 ಸಕ್ರಿಯ ಪ್ರಕರಣಗಳು ದೇಶದಲ್ಲಿವೆ. ಒಟ್ಟು ಚೇತರಿಕೆಯಲ್ಲಿನ ಶೇಕಡ 51ರಷ್ಟು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕೇರಳದಲ್ಲಿ ದಾಖಲಾಗಿದೆ.
ಈ ಅವಧಿಯಲ್ಲಿ 16,754 ಹೊಸ ಪ್ರಕರಣಗಳು ವರದಿಯಾಗಿದ್ದು ಸೋಂಕಿತರ ಒಟ್ಟು ಸಂಖ್ಯೆ 1,04,12,704ಕ್ಕೆ ಏರಿದೆ. 219 ಮಂದಿ ಮೃತಪಟ್ಟಿದ್ದು ಒಟ್ಟು ಬಲಿಯಾದವರು 1,50,592. ಹೊಸ ಪ್ರಕರಣಗಳ ಸಂಖ್ಯೆ ಬುಧವಾರಕ್ಕಿಂತ ಶೇ.12 ಏರಿಕೆಯಾಗಿದೆ.

**70 ಮಿಲಿಯನ್ ಡೋಸ್ ಸಂಗ್ರಹ:** ಲಸಿಕೀಕರಣಕ್ಕೆ ಸರ್ಕಾರ ಭಾರಿ ಸಿದ್ಧತೆ ನಡೆಸುತ್ತಿರುವುದರ ನಡುವೆಯೇ, ಲಸಿಕೆ ತಯಾರಿಕೆ ಸಂಸ್ಥೆಗಳು ಮತ್ತು ಸರ್ಕಾರದ ನಡುವೆ ಇನ್ನೂ ಅಧಿಕೃತ ಒಪ್ಪಂದ ಆಗದಿರುವುದರಿಂದ ಲಸಿಕೆ ಕಂಪನಿಗಳ ಸಂಗ್ರಹಾಗಾರದಲ್ಲಿ ಕನಿಷ್ಠ 70 ಮಿಲಿಯನ್ ಡೋಸ್ ಉಳಿದಿದೆ.


ಸಾಂದರ್ಭಿಕ ಚಿತ್ರ

## ಚೀನಾದಲ್ಲಿ ಲಾಕ್‌ಡೌನ್

ಉತ್ತರ ಚೀನಾದ ಹುಬೆ ಪ್ರಾಂತ್ಯದಲ್ಲಿ ಗುರುವಾರ ಅತಿ ಹೆಚ್ಚಿನ ಕೋವಿಡ್-19 ಪ್ರಕರಣಗಳು ಪತ್ತೆಯಾಗಿದ್ದು, ವೈರಸ್ ಹರಡುವುದನ್ನು ತಡೆಯುವ ಉದ್ದೇಶದಿಂದ ಜನರು ನಗರದಿಂದ ಹೊರಹೋಗುವ ಮೇಲೆ ನಿಷೇಧ ವಿಧಿಸಲಾಗಿದೆ. ದೇಶದಲ್ಲಿ ಗುರುವಾರ 52 ಪ್ರಕರಣಗಳು ಪತ್ತೆಯಾಗಿದ್ದು, 51 ಕೇಸ್ ಹುಬೆ ಪ್ರಾಂತ್ಯದಿಂದಲೇ ವರದಿಯಾಗಿದೆ.

## ಕೇರಳಕ್ಕೆ 8.4 ಲಕ್ಷ ವಲಸಿಗರು ವಾಪಸ್

ಕರೊನಾ ಮಹಾಮಾರಿ ಹಿನ್ನೆಲೆಯಲ್ಲಿ ಹಲವು ದೇಶಗಳಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 8.43 ಲಕ್ಷ ಜನರು ಕೇರಳಕ್ಕೆ ವಾಪಸಾಗಿದ್ದಾರೆ. ಈ ಪೈಕಿ ಸುಮಾರು 5.5 ಲಕ್ಷ ಜನರು ಕೆಲಸ ಕಳೆದುಕೊಂಡಿದ್ದಾರೆ ಎಂದು ಸರ್ಕಾರ ತಿಳಿಸಿದೆ. ಕೇರಳದ ವಿದೇಶಿ ಆದಾಯದ ಪ್ರಮುಖ ಮೂಲವಾದ ಪಶ್ಚಿಮ ಏಷ್ಯಾ ದೇಶಗಳಿಂದ ಬಹುತೇಕ ಜನರು ಹಿಂದಿರುಗಿರುವುದರಿಂದ ರಾಜ್ಯದ ಆರ್ಥಿಕತೆ ಮೇಲೆ ದೀರ್ಘಕಾಲೀನ ದುಷ್ಪರಿಣಾಮ ಬೀರುವ ಸಾಧ್ಯತೆಯಿದೆ. 2020ರ ಮೇ ತಿಂಗಳ ಮೊದಲ ವಾರದಿಂದ ಈ ವರ್ಷ ಜನವರಿ 4ರ ನಡುವೆ ಇಷ್ಟು ಜನರು ಕೇರಳಕ್ಕೆ ವಾಪಸ್ ಬಂದಿದ್ದಾರೆ. ಕಳೆದ 30 ದಿನಗಳಲ್ಲೇ 1.40 ಲಕ್ಷ ಜನರು ಮರಳಿದ್ದಾರೆ. ಬಹುತೇಕ ಜನರು ಕರೊನಾದಿಂದ ಉದ್ಭವಿಸಿದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಉದ್ಯೋಗ ಕಳೆದುಕೊಂಡವರಾಗಿದ್ದಾರೆ. ಇನ್ನು ಕೆಲವರು ತಮ್ಮ ಉದ್ಯೋಗ ವೀಸಾದ ಅವಧಿ ಮುಗಿದಿರುವುದರಿಂದ ಮರಳಿದ್ದಾಗಿ ಹೇಳಿದ್ದಾರೆ. ವಿದೇಶಗಳಲ್ಲಿ ಉದ್ಯೋಗದಲ್ಲಿರುವವರಿಂದ ಕೇರಳಕ್ಕೆ 2018ರಲ್ಲಿ ಸುಮಾರು 85,000 ಕೋಟಿ ರೂಪಾಯಿ ಹರಿದು ಬಂದಿತ್ತು. 2020ರಲ್ಲಿ ಒಂದು ಲಕ್ಷ ಕೋಟಿ ಬರುವ ನಿರೀಕ್ಷೆಯಿತ್ತು.

Bengaluru Edition
Jan 8, 2021 Page No. 12
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

# ವಾರದಲ್ಲಿ ರಾಜ್ಯಕ್ಕೆ ಕರೊನಾ ಲಸಿಕೆ?

## 19 ರಾಜ್ಯಕ್ಕೆ ಮೊದಲ ಹಂತದಲ್ಲಿ ಪೂರೈಕೆ

ಮೊದಲನೇ ಪುಟದಿಂದ...

**ಡಿಸಿಜಿಐ ಅನುಮೋದನೆ:** ಭಾರತ ಔಷಧಗಳ ಮಹಾ ನಿಯಂತ್ರಕರು (ಡಿಸಿಜಿಐ) ಜ. 3ರಂದು ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಲಸಿಕೆಗಳ ಸೀಮಿತ ತುರ್ತು ಬಳಕೆಗೆ ಅನುಮೋದನೆ ನೀಡಿದ್ದರು.

### 41 ಕೇಂದ್ರಗಳು

ದೇಶದಾದ್ಯಂತ 41 ವಿಮಾನ ನಿಲ್ದಾಣಗಳನ್ನು ಲಸಿಕೆ ಸರಬರಾಜು ಮಾಡುವ ಕೇಂದ್ರಗಳೆಂದು ಗುರುತಿಸಲಾಗಿದೆ.

### ಸಾಗಾಟ ಯೋಜನೆ ಅಂತಿಮ

ಕೊವಿಡ್-19 ಲಸಿಕೆಯನ್ನು ವಿಮಾನಗಳ ಮೂಲಕ ದೇಶದ ವಿವಿಧ ಕೇಂದ್ರಗಳಿಗೆ ಸಾಗಿಸುವ ಯೋಜನೆಯನ್ನು ಕೇಂದ್ರ ಸರ್ಕಾರ ಅಂತಿಮಗೊಳಿಸಿದೆ. ಗುರುವಾರ ಅಥವಾ ಶುಕ್ರವಾರವೇ ವೈಮಾನಿಕ ಸಾಗಾಟ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

- ಲಸಿಕೆ ವಿತರಣೆಗೆ ಪುಣೆ ಮುಖ್ಯ ಕೇಂದ್ರವಾಗಿರುತ್ತದೆ. ಪ್ರಯಾಣಿಕ ವಿಮಾನಗಳಲ್ಲೂ ಲಸಿಕೆ ಸಾಗಾಟಕ್ಕೆ ಅವಕಾಶವಿದೆ.
- ಪುಣೆ ವಿಮಾನ ನಿಲ್ದಾಣ ಭಾರತೀಯ ವಾಯುಪಡೆಯ ವ್ಯಾಪ್ತಿಗೆ ಬರುವುದರಿಂದ ಐಎಎಫ್ ಕೂಡ ಇದರ ಭಾಗವಾಗಿರುತ್ತದೆ.

# ಇಂದು 2ನೇ ತಾಲೀಮು

ಮೊದಲನೇ ಪುಟದಿಂದ...

ಕರೊನಾ ಲಸಿಕೆಯ ವಿತರಣೆಗೆ ಸಿದ್ಧತೆ, ಕೇಂದ್ರ ಸರ್ಕಾರದಿಂದ ಬೇಕಿರುವ ಸಹಾಯದ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಜ.8ರಂದು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಮೂರು ಕಡೆ ಲಸಿಕೆ ವಿತರಣೆಯ ತಾಲೀಮು ನಡೆಯಬೇಕಿತ್ತು ಎಂದರು. ಆದರೆ ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಯ ಏಳು ವ್ಯವಸ್ಥೆಯಲ್ಲಿ ತಯಾರಿ ಮಾಡಿದ್ದು, ಲಸಿಕೆಯ ಪೂರ್ವಾಭ್ಯಾಸ ನಡೆಯಲಿದೆ ಎಂದರು. ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 6.30 ಲಕ್ಷ ಸಿಬ್ಬಂದಿ ಲಸಿಕೆ ವಿತರಣೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನೂ ಕೂಡ ನೋಂದಣಿ ಮಾಡಿಸುವುದಾದರೆ ಬರಬಹುದು. 1 ಕೋಟಿ ಲಸಿಕೆಗಳನ್ನು ಕೇಂದ್ರ ಸರ್ಕಾರ ನಾನಾ ರಾಜ್ಯಗಳಿಗೆ ನೀಡಲಿದೆ. ಪೊಲೀಸರು, ಆರೋಗ್ಯ ಸಿಬ್ಬಂದಿ, ರಕ್ಷಣಾ ಸಿಬ್ಬಂದಿ, ಕೊರೊನಾ ನಿಯಂತ್ರಣದಲ್ಲಿ ಕಾರ್ಯಪ್ರವೃತ್ತರಾಗಿರುವವರಿಗೆ ಲಸಿಕೆ ಮೊದಲಿಗೆ ದೊರೆಯಲಿದೆ ಎಂದು ತಿಳಿಸಿದರು.

### ಎಷ್ಟು ಕಡೆ ತಾಲೀಮು

24 ಜಿಲ್ಲಾಸ್ಪತ್ರೆ, 20 ಮೆಡಿಕಲ್ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 28 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ತಾಲೀಮು ನಡೆಯಲಿದೆ.

### ಕೇಂದ್ರ ಕಳಿಸಿದ್ದೇನೇನು?

ಈವರೆಗೆ ಕಳುಹಿಸಿಕೊಟ್ಟಿರುವ 24 ಲಕ್ಷ ಸಿರಿಂಜ್‌ಗಳನ್ನು ಎಲ್ಲ ಜಿಲ್ಲೆಗಳಿಗೆ ಕಳುಹಿಸಿಕೊಡಲಾಗಿದೆ. ರಾಜ್ಯದಲ್ಲಿ 10 ವಾಕ್ - ಇನ್ ಕೂಲರ್, 4 ವಾಕ್ -ಇನ್ ಫ್ರೀಜರ್, 3,201 ಐಎಲ್ ಆರ್, 3039 ಡೀಪ್ ಫ್ರೀಜರ್, 3,312 ಕೋಲ್ಡ್ ಬಾಕ್ಸ್, 46,591 ಲಸಿಕೆ ಕ್ಯಾರಿಯರ್, 2,25,749 ಐಸ್ ಪ್ಯಾಕ್ ಲಭ್ಯವಿದೆ. ಕೇಂದ್ರವು 225 ಲೀಟರ್ ಸಾಮರ್ಥ್ಯದ 64 ಐಎಲ್‌ಆರ್‌ಗಳನ್ನು ಕಳುಹಿಸಿಕೊಟ್ಟಿದೆ. ಇನ್ನೂ 2 ವಾಕ್ - ಇನ್ ಕೂಲರ್, 1 ವಾಕ್ - ಇನ್ ಫ್ರೀಜರ್ ಕಳುಹಿಸಿಕೊಡುವುದಾಗಿ ಕೇಂದ್ರ ತಿಳಿಸಿದೆ.

## ಕೋವಿಡ್ ಲಸಿಕೆ ಕಡ್ಡಾಯವಿಲ್ಲ

**ಬೆಂಗಳೂರು:** ಕೋವಿಡ್ ಲಸಿಕೆಯನ್ನು ಎಲ್ಲರೂ ಕಡ್ಡಾಯವಾಗಿ ಪಡೆಯಬೇಕೆಂಬ ನಿಯಮವಿಲ್ಲ. ಆದರೆ, ಮುನ್ನೆಚ್ಚರಿಕೆ ಕ್ರಮವಾಗಿ ಸ್ವಯಂಪ್ರೇರಿತರಾಗಿ ತೆಗೆದುಕೊಳ್ಳುವುದು ಸೂಕ್ತ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ರೋಗದಿಂದ ರಕ್ಷಿಸಿಕೊಳ್ಳಲು ಹಾಗೂ ಸೋಂಕು ಹರಡುವುದನ್ನು ತಡೆಯಲು ಲಸಿಕೆ ಹಾಕಿಸಿಕೊಳ್ಳುವುದು ಒಳ್ಳೆಯದು ಎಂದು ಇಲಾಖೆ ಸಲಹೆ ನೀಡಿದೆ. ಲಸಿಕೆಗಳ ಲಭ್ಯತೆ ಆಧಾರದ ಮೇಲೆ ಮೊದಲ ಹಂತದಲ್ಲಿ ಹೆಚ್ಚಿನ ಅಪಾಯದಲ್ಲಿರುವವರಿಗೆ ನೀಡಲಾಗುತ್ತದೆ. ಪ್ರಥಮ ಆದ್ಯತೆಯ ಗುಂಪಿನಲ್ಲಿ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. ದ್ವಿತೀಯ ಗುಂಪಿನಲ್ಲಿ 50 ವರ್ಷ ಮೇಲ್ಪಟ್ಟವರು ಹಾಗೂ ಅಪಾಯದ ವರ್ಗದಲ್ಲಿರುವವರನ್ನು ಪರಿಗಣಿಸಲಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ಉದಯವಾಣಿ
ಜನಮನದ ಜೀವನಾಡಿ

# 30 ಜಿಲ್ಲೆಗಳ 263 ಕೇಂದ್ರಗಳಲ್ಲಿ ಡ್ರೈರನ್

**ಬೆಂಗಳೂರು:** ರಾಜ್ಯಾದ್ಯಂತ ಇಂದು (ಶುಕ್ರವಾರ) ಕೊರೊನಾ ಲಸಿಕೆ ವಿತರಣೆಗೆ ಅಂತಿಮ ತಾಲೀಮು ನಡೆಯಲಿದೆ. 30 ಜಿಲ್ಲೆಗಳ 263 ಆರೋಗ್ಯ ಕೇಂದ್ರಗಳಲ್ಲಿ ನಡೆಯಲಿರುವ ಲಸಿಕೆ ವಿತರಣೆ ಅಣಕಿನಲ್ಲಿ (ಡ್ರೈ ರನ್) ಒಂದು ಸಾವಿರಕ್ಕೂ ಅಧಿಕ ಲಸಿಕೆ ವಿತರಣಾ ಆರೋಗ್ಯ ಸಿಬ್ಬಂದಿಗಳು, ಆರು ಸಾವಿರಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದಾರೆ.

ಈಗಾಗಲೇ ಜ.2 ರಂದು ಸೀಮಿತ ಜಿಲ್ಲೆಗಳ 16 ಆರೋಗ್ಯ ಕೇಂದ್ರದಲ್ಲಿ ಮೊದಲ ಹಂತದ ಡ್ರೈ ರನ್ ನಡೆದಿತ್ತು. ಈಗ ಕೇಂದ್ರ ಸರ್ಕಾರ ಲಸಿಕೆ ವಿತರಣೆ ದಿನಾಂಕ ನಿಗದಿ ಪಡಿಸಿದ ಹಿನ್ನೆಲೆ ಪ್ರತಿ ಜಿಲ್ಲೆಯ 7 ಆರೋಗ್ಯ ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಹಿಂದಿನಂತೆಯೇ ಪ್ರತಿ ಆರೋಗ್ಯ ಕೇಂದ್ರಕ್ಕೆ ಐವರು ಲಸಿಕೆ ವಿತರಣೆ ಸಿಬ್ಬಂದಿ, 25 ಆರೋಗ್ಯ ಕಾರ್ಯಕರ್ತರನ್ನು ಪ್ರಾತ್ಯಕ್ಷಿಕೆ ಫಲಾನುಭವಿಗಳಾಗಿ ನಿಯೋಜಿಸಲಾಗಿದೆ. ಲಸಿಕೆ (ಚುಚ್ಚುಮದ್ದು) ನೀಡುವುದೊಂದನ್ನು ಹೊರತುಪಡಿಸಿ ಬಾಕಿ ಎಲ್ಲಾ ಚಟುವಟಿಕೆಗಳು ನಡೆಯಲಿವೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

- **ಲಸಿಕೆ ವಿತರಣೆ ಸಿಬ್ಬಂದಿ -1,315**
- **ಒಟ್ಟು ಆರೋಗ್ಯ ಕೇಂದ್ರಗಳು - 263**
- **ಲಸಿಕೆ ವಿತರಣೆ ಸಿಬ್ಬಂದಿ - 1,315**
- **ಪ್ರಾತ್ಯಕ್ಷಿಕೆ ಫಲಾನುಭವಿಗಳು - 6,575**



**ಎಲ್ಲೆಲ್ಲಿ ಲಸಿಕೆ ವಿತರಣೆ ತಾಲೀಮು?** : ರಾಜ್ಯದ 24 ಜಿಲ್ಲಾಸ್ಪತ್ರೆ, 20 ವೈದ್ಯಕೀಯ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 28 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ತಾಲೀಮು ನಡೆಯಲಿದೆ.

**ಪ್ರಕ್ರಿಯೆ ಹೇಗಿರುತ್ತದೆ?:** ಆರೋಗ್ಯ ಕೇಂದ್ರಕ್ಕೆ ಈಗಾಗಲೇ ನಿಯೋಜಿಸಿರುವ 25 ಫಲಾನುಭವಿಗಳು ತಮ್ಮ ಮೊಬೈಲ್‌ಗೆ ಬಂದಿರುವ ಸಂದೇಶದೊಂದಿಗೆ ಆರೋಗ್ಯ ಕೇಂದ್ರಕ್ಕೆ ಬರಲಿದ್ದಾರೆ. ಅವರಿಗೆ ಬಂದಿರುವ ಸಂದೇಶ ಮತ್ತು ಗುರುತಿನ ಚೀಟಿ ಪರಿಶೀಲಿಸಿ ಒಳಗೆ ಕಳುಹಿಸಲಾಗುತ್ತದೆ. ಮೊದಲ ನಿರೀಕ್ಷಾ ಕೊಠಡಿಯಲ್ಲಿ ಕುಳಿತು, ಆ ಬಳಿಕ ಚುಚ್ಚುಮದ್ದು ಕೋಣೆಗೆ ತೆರಳಿ (ಚುಚ್ಚು ಮದ್ದು ನೀಡುವುದಿಲ್ಲ) ಅಲ್ಲಿಂದ ನಿಗಾ ಕೊಠಡಿಯಲ್ಲಿ 30 ನಿಮಿಷ ಕುಳಿತುಕೊಂಡು ಬಳಿಕ ಲಸಿಕೆ ವಿತರಣೆ ಯಶಸ್ವಿಯಾಗಿದೆ ಎಂಬ ಸಂದೇಶದೊಂದಿಗೆ ಆರೋಗ್ಯ ಕೇಂದ್ರದಿಂದ ಹೊರಬರಲಿದ್ದಾರೆ. ಬೆಳಗ್ಗೆ 9 ರಿಂದ 12 ಗಂಟೆವರೆಗೂ ಡ್ರೈ ರನ್ ನಡೆಯಲಿದೆ.

ಉದಯವಾಣಿ
ಜನಮನದ ಜೀವನಾಡಿ

# ರೂಪಾಂತರ ದೃಢಪಟ್ಟಿದ್ದ ಇಬ್ಬರು ಗುಣಮುಖ

## ಮೊದಲು ಸೋಂಕು ದೃಢಪಟ್ಟಿದ್ದ ತಾಯಿ-ಮಗಳು ಚೇತರಿಕೆ ■ ಬಾಕಿ 9 ಮಂದಿ ಆಸ್ಪತ್ರೆಯಲ್ಲಿ ನಿಗಾ

**ಬೆಂಗಳೂರು:** ರಾಜ್ಯದಲ್ಲಿ ಮೊದಲು ಬ್ರಿಟನ್ ರೂಪಾಂತರ ಕೊರೊನಾ ವೈರಸ್ ಸೋಂಕು ದೃಢಪಟ್ಟಿದ್ದ ಇಬ್ಬರು ಗುಣ ಮುಖರಾಗಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಬಾಕಿ 9 ಸೋಂಕಿತರು ಆಸ್ಪತ್ರೆಯ ಐಸೋಲೇಷನ್ ವಾರ್ಡ್‌ನಲ್ಲಿ ನಿಗಾದಲ್ಲಿದ್ದಾರೆ.

ಇಂಗ್ಲೆಂಡ್‌ನಿಂದ ಬಂದು ಬ್ರಿಟನ್ ರೂಪಾಂತರ ಸೋಂಕು ದೃಢಪಟ್ಟಿದ್ದ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ವಸಂತಪುರ ವಾರ್ಡ್‌ನ 35 ವರ್ಷದ ಮಹಿಳೆ ಮತ್ತು ಆಕೆಯ 6 ವರ್ಷದ ಬಾಲಕಿ ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿದ್ದರು. ಡಿ.24 ರಂದು ಕೊರೊನಾ ದೃಢಪಟ್ಟಿತ್ತು, ಡಿ. 27ಕ್ಕೆ ಕೊರೊನಾ ವಂಶವಾಹಿನಿ ಪರೀಕ್ಷೆಯಲ್ಲಿ ಬ್ರಿಟನ್ ರೂಪಾಂತರ ತಗುಲಿರುವುದು ಪತ್ತೆಯಾಗಿತ್ತು. ಸದ್ಯ ಈ ಇಬ್ಬರ ಕೊರೊನಾ ಸೋಂಕು ಪರೀಕ್ಷಾ ವರದಿ ನೆಗೆಟಿವ್ ಬಂದ ಹಿನ್ನೆಲೆ ಆಸ್ಪತ್ರೆಯಿಂದ ಬುಧವಾರ ರಾತ್ರಿ ಬಿಡುಗಡೆ ಮಾಡಲಾಗಿದೆ.

'ಈ ಇಬ್ಬರಿಗೆ ಸೋಂಕಿನ ಲಕ್ಷಣಗಳಿರಲಿಲ್ಲ, ಆಸ್ಪತ್ರೆಗೆ ದಾಖಲಾಗಿ 14 ದಿನಗಳಾಗಿತ್ತು. ಎರಡು ಬಾರಿ ನೆಗೆಟಿವ್ ಬಂದ ಹಿನ್ನೆಲೆ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಮುಂದಿನ 14 ದಿನ ಮನೆಯಲ್ಲಿ ಕಡ್ಡಾಯ ಕ್ವಾರಂಟೈನ್ ಇರಬೇಕು. ಸೋಂಕು ಲಕ್ಷಣಗಳು ಕಂಡು ಬಂದರೆ ಆಸ್ಪತ್ರೆಗೆ ಆಗಮಿಸುವಂತೆ ಅಥವಾ ವೈದ್ಯರನ್ನು ಸಂಪರ್ಕಿಸುವಂತೆ ಸೂಚನೆ ನೀಡಲಾಗಿದೆ' ಎಂದು ವಿಕ್ಟೋರಿಯಾ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

### 205 ಮಂದಿ ಇನ್ನೂ ನಾಪತ್ತೆ!

**ಬೆಂಗಳೂರು:** ಬ್ರಿಟನ್‌ನಿಂದ ಬಂದು ನಾಪತ್ತೆ ಆದವರ ಸಂಖ್ಯೆ ಹೆಚ್ಚಾಗುತ್ತಿದ್ದು ನಗರದಲ್ಲಿ ರೂಪಾಂತರ ಕೊರೊನಾ ಸೋಂಕು ಹಬ್ಬುವ ಆತಂಕ ಮತ್ತಷ್ಟು ಹೆಚ್ಚಾಗಿದೆ. ಒಟ್ಟಾರೆ ನಾಪತ್ತೆ ಆಗಿರುವವರ ಸಂಖ್ಯೆ 205ಕ್ಕೆ ಏರಿಕೆಯಾಗಿದೆ. ಬ್ರಿಟನ್‌ನಿಂದ ಇಲ್ಲಿಯವರೆಗೆ ಒಟ್ಟು 2,066 ಜನ ಆಗಮಿಸಿದ್ದು, 1,861 ಮಂದಿ ಪತ್ತೆಯಾಗಿದ್ದಾರೆ. ಕಳೆದ ಬುಧವಾರ 173 ಮಂದಿ ಮಾತ್ರ ನಾಪತ್ತೆಯಾಗಿದ್ದಾರೆ ಎಂದು ಹೇಳಲಾಗಿತ್ತು. ಇದೀಗ 205ಕ್ಕೆ ಏರಿಕೆಯಾಗಿದೆ. ಬ್ರಿಟನ್‌ನಿಂದ ಬಂದವರಲ್ಲಿ 1,861 ಜನರ ವಿಳಾಸ ಲಭ್ಯವಾಗಿದ್ದು, 1,755 ಜನರನ್ನು ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಇನ್ನೂ 112 ಜನರ ಸೋಂಕು ಪರೀಕ್ಷೆ ಇನ್ನಷ್ಟೇ ಆಗಬೇಕಿದೆ. ಬ್ರಿಟನ್‌ನಿಂದ ಹಿಂದಿರುಗಿದ 27 ಮಂದಿಗೆ ಹಾಗೂ ಇವರ ಸಂಪರ್ಕದಲ್ಲಿದ್ದ 16 ಜನರಿಗೆ ಕೊರೊನಾ ಸೋಂಕು ದೃಢಪಡುವ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 43ಕ್ಕೆ ಏರಿಕೆಯಾದಂತಾಗಿದೆ. ಸೋಂಕಿತರೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿ ಇದ್ದ 80 ಮಂದಿ ಹಾಗೂ ಪರೋಕ್ಷ ಸಂಪರ್ಕದಲ್ಲಿ ಇದ್ದ 110 ಮಂದಿಯನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ ಎಂದು ಬಿಬಿಎಂಪಿಯ ಆರೋಗ್ಯ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

### ಇನ್ನಷ್ಟೇ ಬರಬೇಕಿದೆ 29 ಮಂದಿಯ ವರದಿ

ಈವರೆಗೂ ಇಂಗ್ಲೆಂಡ್‌ನಿಂದ ಬಂದ 40 ಪ್ರಯಾಣಿಕರು, ಅವರ ಸಂಪರ್ಕದಲ್ಲಿದ್ದ 25 ಮಂದಿಗೆ ಸೇರಿ 65 ಕೊರೊನಾ ಪಾಸಿಟಿವ್ ಬಂದಿದೆ. ಇವರೆಲ್ಲರಿಗೂ ಕೊರೊನಾ ವಂಶವಾಹಿನಿ ಪರೀಕ್ಷೆ ಕಡ್ಡಾಯಗೊಳಿಸ ಲಾಗಿದೆ. ಈವರೆಗೂ 36 ಮಂದಿಯ ಕೊರೊನಾ ವಂಶವಾಹಿನಿ ಪರೀಕ್ಷೆನಡೆದಿದ್ದು, ಬಾಕಿ 29 ಮಂದಿ ವರದಿ ಬರಬೇಕಿದೆ. ನಿಮ್ಹಾನ್ಸ್‌ನಲ್ಲಿರು ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಯುತ್ತಿದೆ.

- ವಿಕ್ಟೋರಿಯಾ, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ರೂಪಾಂತರ ಸೋಂಕಿತರಿಗೆ ಚಿಕಿತ್ಸೆ
- 11 ಬ್ರಿಟನ್ ವೈರಸ್ ಸೋಂಕಿತರ ಪೈಕಿ ಇಬ್ಬರು ಗುಣಮುಖ

### ಸಾರ್ವಜನಿಕರಿಂದ ನಿರ್ಲಕ್ಷ್ಯ

**ಬೆಂಗಳೂರು:** ಜನರು ಕೊರೊನಾ ವೈರಸ್ ಹೊರಟುಹೋಗಿದೆ ಎಂಬ ಭ್ರಮೆಯಲ್ಲಿದ್ದು, ಮಾಸ್ಕ್ ಧರಿಸಲು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಬೇಸರವ್ಯಕ್ತಪಡಿಸಿದರು. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಜನರು ಮಾಸ್ಕ್ ಹಾಕುವುದನ್ನು ಬಿಟ್ಟೇ ಬಿಟ್ಟಿದ್ದಾರೆ. ಕೊರೊನಾ ಹೊರಟೇ ಹೋಗಿದೆ ಎಂಬ ಭ್ರಮೆಯಲ್ಲಿದ್ದಾರೆ. ಈ ರೀತಿ ನಿರ್ಲಕ್ಷ್ಯ ಏಕೆ ಎಂದೇ ಅರ್ಥ ಆಗುತ್ತಿಲ್ಲ. ಪ್ರತಿಯೊಬ್ಬರಿಗೂ ಲಸಿಕೆ ಪಡೆದು, ಸುರಕ್ಷಿತರಾಗುವ ತನಕ ಕೊರೊನಾ ವೈರಾಣು ನಮ್ಮ ಮಧ್ಯೆ ಇದೆ ಎಂದು ತಿಳಿದುಕೊಂಡು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು. ಬ್ರಿಟನ್‌ನಲ್ಲಿ ಬುಧವಾರ ಒಂದೇ ದಿನ 70 ಸಾವಿರ ಮಂದಿಗೆ ಸೋಂಕು ಬಂದಿದೆ. 1,100 ಜನ ಒಂದೇ ದಿನ ಮರಣವನ್ನಪ್ಪಿದ್ದಾರೆ ಎಂದು ಸಚಿವ ಸುಧಾಕರ್ ತಿಳಿಸಿದ್ದಾರೆ.

### ಜ.17ರಂದು ಪೋಲಿಯೋ ಲಸಿಕೆ

ಜನವರಿ 17 ರಂದು ಪೋಲಿಯೋ ಲಸಿಕೆ ವಿತರಣೆ ಕಾರ್ಯ ನಡೆಯಲಿದೆ. ಒಟ್ಟು 65 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಉದ್ದೇಶವಿದೆ. ಈ ಕುರಿತು ಎಲ್ಲಾ ತಯಾರಿ ನಡೆಸಲಾಗಿದೆ. ಕೊರೊನಾ ಲಸಿಕೆಯಿಂದ ಯಾವುದೇ ಅಪಾಯವಿಲ್ಲ, ಇದರಿಂದಾಗಿ ಜನರಿಗೆ ಅನುಕೂಲವಾಗುತ್ತದೆ. ಎಲ್ಲರೂ ಜವಾಬ್ದಾರಿಯುತ ವಾಗಿ ನಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.



### ಹಕ್ಕಿಜ್ವರ ಭೀತಿ ಬೇಡ

ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುತ್ತಿರುವ ಸಮಯದಲ್ಲಿ ಕೊರೊನಾ ಬಗ್ಗೆ ವಿನಾಕಾರಣ ಭೀತಿ ಮೂಡಿಸಬಾರದು. ಸರ್ಕಾರ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಿದೆ. ದಕ್ಷಿಣ ಕನ್ನಡದಲ್ಲಿ 6 ಕಾಗೆಗಳು ಸಾವನ್ನಪ್ಪಿದ್ದು, ಪರೀಕ್ಷೆಗೆ ಕಳುಹಿಸಲಾಗಿದೆ. ಹಕ್ಕಿಜ್ವರ ಬಾರದಂತೆ ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದರು.

## ನಗರದ ಎಂಟು ಭಾಗದಲ್ಲಿ ಲಸಿಕೆ ಡ್ರೈರನ್

**ಬೆಂಗಳೂರು:** ನಗರದಲ್ಲಿ ಎರಡನೇ ಹಂತದ ಕೋವಿಡ್ ಲಸಿಕೆ ತಾಲೀಮು (ಡ್ರೈ ರನ್) ಶುಕ್ರವಾರ ಬೆಳಗ್ಗೆ 9 ಗಂಟೆಯಿಂದ 11 ಗಂಟೆವರೆಗೆ ನಡೆಯಲಿದೆ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜೇಂದ್ರ ಹೇಳಿದರು.

ಈ ಸಂಬಂಧ ಪ್ರತಿಕ್ರಿಯಿಸಿದ ಅವರು, ಕೇಂದ್ರ ಆರೋಗ್ಯ ಇಲಾಖೆ ಸೂಚನೆಯಂತೆ ಶುಕ್ರವಾರ ಪಾಲಿಕೆಯ ಎಂಟು ವಲಯಗಳಲ್ಲಿ ತಲಾ ಒಂದು ಆಸ್ಪತ್ರೆಯಲ್ಲಿ ತಾಲೀಮು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಕಳೆದ ಬಾರಿ ನಗರದಲ್ಲಿ ಡ್ರೈರನ್ ನಡೆಸುವ ವೇಳೆ ಸೃಷ್ಟಿಯಾಗಿದ್ದ ಗೊಂದಲ ಬಗೆಹರಿಸಿಕೊಳ್ಳಲಾಗಿದೆ ಎಂದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ರೆಫೆರಲ್ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ತಲಾ 25 ಆರೋಗ್ಯ ಸೇವಾ ಕಾರ್ಯಕರ್ತರಿಗೆ ಈ ಬಾರಿ ಕೋವಿಡ್ ಲಸಿಕೆ ತಾಲೀಮು ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು. ಕಳೆದ ಜ.3 ರಂದು ಬಿಬಿಎಂಪಿ ಎರಡು ಕೇಂದ್ರಗಳಾದ ಕಾಮಾಕ್ಷಿಪಾಳ್ಯ ಮತ್ತು ವಿದ್ಯಾಪೀಠ ಪ್ರಾಥಮಿಕ ಆರೋಗ್ಯ ಕೇಂದ್ರ(ಪಿಎಚ್‌ಸಿ)ಗಳಲ್ಲಿ ಮಾತ್ರ ಕೋವಿಡ್ ಲಸಿಕೆ ತಾಲೀಮು ನಡೆದಿತ್ತು. ಶುಕ್ರವಾರ ಎರಡು ಮೆಡಿಕಲ್ ಕಾಲೇಜು, ಎರಡು ಖಾಸಗಿ ಆಸ್ಪತ್ರೆ, ಎರಡು ಬಿಬಿಎಂಪಿ ಆಸ್ಪತ್ರೆ ಹಾಗೂ ಎರಡು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ. ಡ್ರೈರನ್ ವೇಳೆ ಲಸಿಕೆ ಹಾಕುವುದನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಪ್ರಕ್ರಿಯೆ ನಡೆಯಲಿದೆ. ಡ್ರೈರನ್‌ಗೆ ಬೇಕಾದ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಅಗತ್ಯ ಸಿಬ್ಬಂದಿ, ಕೊಠಡಿ, ವಾಹನ ವ್ಯವಸ್ಥೆ ಸೇರಿದಂತೆ ಆಗಿದೆ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಲಸಿಕೆ ವಿತರಣೆ ಕೇಂದ್ರ ಸ್ಥಾಪಿಸಲು ಬಿಬಿಎಂಪಿ, ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮತ್ತು ಮೆಡಿಕಲ್ ಕಾಲೇಜುಗಳನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದ್ದು, ಇಲ್ಲಿಯವರೆಗೆ 1,600 ಸ್ಥಳಗಳನ್ನು ಗುರುತಿಸಲಾಗಿದೆ. ಗುರುವಾರ ನಡೆದ ಬಿಬಿಎಂಪಿಯ ಎಲ್ಲ ವಲಯದ ಆರೋಗ್ಯಾಧಿಕಾರಿಗಳ ಸಭೆಯಲ್ಲಿ ಎಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಎಷ್ಟು ಲಸಿಕೆ ವಿತರಣೆ ಕೇಂದ್ರ ಪ್ರಾರಂಭಿಸಲು ಅವಕಾಶ ಇದೆ ಎಂಬ ಮಾಹಿತಿ ಕೇಳಿದ್ದೇವೆ. ವರದಿ ನೀಡಿದ ನಂತರ ಮುಂದಿನ ಯೋಜನೆ ರೂಪಿಸಿಕೊಳ್ಳುತ್ತೇವೆ ಎಂದು ವಿಜೇಂದ್ರ ತಿಳಿಸಿದರು.

### ಡ್ರೈರನ್ ನಡೆಯುವ ಕೇಂದ್ರಗಳು

| ವಲಯ | ಆಸ್ಪತ್ರೆ |
|---|---|
| ಬೊಮ್ಮನಹಳ್ಳಿ | ಸಿಂಗಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) ಬಿಬಿಎಂಪಿ |
| ಪೂರ್ವ | ಹಲಸೂರಿನ ರೆಫರಲ್ ಆಸ್ಪತ್ರೆ (ಬಿಬಿಎಂಪಿ) |
| ಮಹದೇವಪುರ | ಕೆ.ಆರ್. ಪುರದ ಸಾರ್ವಜನಿಕ ಆಸ್ಪತ್ರೆ (ಸರ್ಕಾರಿ) |
| ರಾಜರಾಜೇಶ್ವರಿನಗರ | ಕೆಂಗೇರಿಯ ಸಾರ್ವಜನಿಕ ಆರೋಗ್ಯ ಕೇಂದ್ರ (ಸರ್ಕಾರಿ) |
| ಪಶ್ಚಿಮ | ಬೆಂಗಳೂರು ವೈದ್ಯಕೀಯ ಕಾಲೇಜು (ಸರ್ಕಾರಿ) |
| ದಕ್ಷಿಣ | ಕಿಮ್ಸ್ ವೈದ್ಯಕೀಯ ಕಾಲೇಜು (ಖಾಸಗಿ) |
| ದಾಸರಹಳ್ಳಿ | ಸಪ್ತಗಿರಿ ವೈದ್ಯಕೀಯ ಕಾಲೇಜು (ಖಾಸಗಿ) |
| ಯಲಹಂಕ | ಆ್ಯಸ್ಟರ್ ಸಿಎಂಐ ಆಸ್ಪತ್ರೆ (ಖಾಸಗಿ) |

ಉದಯವಾಣಿ
ಜನಮನದ ಜೀವನಾಡಿ

# ಗುತ್ತಿಗೆದಾರ ಆತ್ಮಹತ್ಯೆ

**ಬೆಂಗಳೂರು:** ಕಾಮಗಾರಿ ಹಣ ಬಿಡುಗಡೆ ಮಾಡದ ಬಿಬಿಎಂಪಿ ವರ್ತನೆಗೆ ಬೇಸತ್ತ ಪ್ರಥಮ ದರ್ಜೆ ಗುತ್ತಿಗೆದಾರರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಹಾಲಕ್ಷ್ಮೀ ಲೇಔಟ್ ಠಾಣಾ ವ್ಯಾಪ್ತಿಯಲ್ಲಿನಡೆದಿದೆ.

ವೈಯಾಲಿಕಾವಲ್‌ನ ಕೋದಂಡರಾಮ ನಗರದ ನಿವಾಸಿ ಕೃಷ್ಣಂರಾಜು ಅಲಿಯಾಸ್ ವಾಣಿ(70) ಮೃತರು. ಬುಧವಾರ ರಾತ್ರಿ ಮಹಾಲಕ್ಷ್ಮೀ ಲೇಔಟ್‌ನ ಬಿಬಿಎಂಪಿಯ ನಾಗಪುರ ವಾರ್ಡ್‌ನ ಡಾ.ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣದ ಕಿಟಕಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಅವರ ಮ್ಯಾನೇಜರ್ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ಕೃಷ್ಣಂರಾಜು ಹತ್ತಾರು ವರ್ಷಗಳಿಂದ ಬಿಬಿಎಂಪಿ ವ್ಯಾಪ್ತಿಯ ಹಲವು ಕಟ್ಟಡಗಳ ನಿರ್ಮಾಣ ಗುತ್ತಿಗೆ ಪಡೆದುಕೊಂಡಿದ್ದು, ರಾಜಾಜಿನಗರ ಕಾಂಪ್ಲೆಕ್ಸ್ ಸೇರಿ ಹಲವು ಕಟ್ಟಡಗಳ ನಿರ್ಮಾಣ ಮಾಡಿದ್ದಾರೆ. 2017ರಿಂದ ಇದುವರೆಗೂ ಸುಮಾರು ಐದು ಕೋಟಿ ರೂ. ಮೌಲ್ಯದ ಗುತ್ತಿಗೆ ಪಡೆದುಕೊಂಡು ಕಾಮಗಾರಿ ನಡೆಸುತ್ತಿದ್ದರು. ಈ ಪೈಕಿ ಎರಡು ಕೋಟಿ ರೂ. ಬಿಡುಗಡೆ ಆಗಿದೆ ಎಂದು ಹೇಳಲಾಗಿದೆ. ಇನ್ನುಳಿದ ಮೂರು ಕೋಟಿ ಪೈಕಿ 1.6 ಕೋಟಿ ಬಿಲ್ ಆಗಿದ್ದು, ಹಣ ಬಿಡುಗಡೆ ಆಗಿಲ್ಲ ಎಂದು ಹೇಳಲಾಗಿದೆ. ಈ ಬಗ್ಗೆ ಸಾಕಷ್ಟು ಬಾರಿ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ, ಹೀಗಾಗಿ ಬುಧವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಉದಯವಾಣಿ
ಜನಮನದ ಜೀವನಾಡಿ

# ಲಸಿಕೆ ಜಗತ್ತು, ಅಭಿವೃದ್ಧಿಯದ್ದೇ ಕಸರತ್ತು!

ಭಾನುವಾರ ಡಿಸಿಜಿಐ ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆಗಳ ತುರ್ತು ಬಳಕೆಗೆ ಅನುಮತಿ ನೀಡಿದೆ. ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಲಸಿಕೀಕರಣಕ್ಕೆ ಈಗಾಗಲೇ ಡ್ರೈರನ್ ಕೂಡ ನಡೆಸಿವೆ. ಈಗ ಜನವರಿ 13ರಂದು ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ. ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಉತ್ಪಾದಿಸುತ್ತಿರುವ ಆಕ್ಸ್‌ಫರ್ಡ್‌ನ ಕೊವಿಶೀಲ್ಡ್ ಲಸಿಕೆ ಹಾಗೂ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ದೇಶೀಯ ಕೊವ್ಯಾಕ್ಸಿನ್ ಲಸಿಕೆಗಳ ಫಲಪ್ರದತೆ, ಕಾರ್ಯವೈಖರಿ ಹೇಗಿದೆ. ಅವಕ್ಕೆ ಹೋಲಿಸಿದರೆ ಈಗ ಜಾಗತಿಕವಾಗಿ ಅನುಮತಿ ಪಡೆದಿರುವ ಲಸಿಕೆಗಳ ಗುಣವೇನು? ಇಲ್ಲಿದೆ ಮಾಹಿತಿ...

## ಸೀರಂ ಇನ್‌ಸ್ಟಿಟ್ಯೂಟ್‌ನ ಕೊವಿಶೀಲ್ಡ್ ಲಸಿಕೆ

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ-ಆಸ್ಟ್ರಾಜೆನೆಕಾ ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸಿರುವ ಲಸಿಕೆಯನ್ನು ಪುಣೆ ಮೂಲದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಉತ್ಪಾದಿಸುತ್ತಿದೆ. ಸೀರಂ ಇನ್‌ಸ್ಟಿಟ್ಯೂಟ್ ಸಾವಿರಾರು ಜನರ ಮೇಲೆ ಈ ಲಸಿಕೆಯ ಪ್ರಯೋಗಗಳನ್ನೂ ಮಾಡಿದೆ. ಕೊವಿಶೀಲ್ಡ್ ಇದೆಯಲ್ಲ, ಇದು 'ಅಡಿನೋ ವೈರಸ್ ವೆಕ್ಟರ್ ಲಸಿಕೆ'. ಈ ರೀತಿಯ ಲಸಿಕೆ ಪ್ರಯೋಗವನ್ನು ಕೇವಲ ಆಕ್ಸ್‌ಫರ್ಡ್ ಅಷ್ಟೇ ಅಲ್ಲದೇ ರಷ್ಯಾದ ಸ್ಪುಟ್ನಿಕ್ ಲಸಿಕೆಯ ಅಭಿವೃದ್ಧಿಗೂ ಬಳಸಲಾಗಿದೆ

### ಅಡಿನೋ ವೈರಸ್ ವೆಕ್ಟರ್



1 ಮೊದಲ ಹಂತವಾಗಿ ವಿಜ್ಞಾನಿಗಳು ಚಿಂಪಾಂಜಿಗಳಲ್ಲಿ ಸೋಂಕು ಉಂಟುಮಾಡುವ ವೈರಸ್(ಅಡಿನೋವೈರಸ್) ಅನ್ನು ಹೊರತೆಗೆಯುತ್ತಾರೆ. ನಂತರ ಅದನ್ನು ಮಾನವನಿಗೆ ತೊಂದರೆಯುಂಟುಮಾಡದಂತೆ ಪರಿವರ್ತಿಸಲಾಗುತ್ತದೆ.



2 ಕೊರೊನಾ ವೈರಸ್‌ನ ಮೇಲ್ಮೈಯಲ್ಲಿ ಮುಳ್ಳಿನ ರೀತಿಯ ಆಕೃತಿ(ಸ್ಪೈಕ್ ಪ್ರೊಟೀನುಗಳು) ಇರುವ ಚಿತ್ರವನ್ನು ನೀವು ನೋಡಿರುತ್ತೀರಿ. ಕೊರೊನಾದಲ್ಲಿ ಈ ರೀತಿಯ ಸ್ಪೈಕ್ ಪ್ರೋಟೀನುಗಳನ್ನು ಸೃಷ್ಟಿಸುವ ಜೀನೋಮುಗಳನ್ನು ಪ್ರತ್ಯೇಕಿಸಿ ಅದನ್ನು ಚಿಂಪಾಂಜಿಯಿಂದ ಈಗಾಗಲೇ ಸಂಗ್ರಹಿಸಿ ನಿಷ್ಕ್ರಿಯಗೊಳಿಸಲಾದ ಅಡಿನೋ ವೈರಸ್‌ಗೆ ಸೇರಿಸಲಾಗುತ್ತದೆ. ಇದರಿಂದಾಗಿ ಅಡಿನೋವೈರಸ್‌ನ ಮೇಲ್ಮೈಯಲ್ಲಿ ಕೊರೊನಾ ವೈರಸ್‌ಗೆ ಇರುವಂಥದ್ದೇ ಮುಳ್ಳಿನ ಆಕೃತಿಗಳು ಸೃಷ್ಟಿಯಾಗುತ್ತವೆ. ಆದರೆ ಇದು ಕೊರೊನಾದಂತೆ ಮನುಷ್ಯನಿಗೆ ಹಾನಿ ಮಾಡುವುದಿಲ್ಲ. ಇದೇ ಕೊವಿಶೀಲ್ಡ್‌ನ ಲಸಿಕೆ.



3 ಯಾವಾಗ ಈ ಲಸಿಕೆಯನ್ನು ಮಾನವನ ದೇಹದೊಳಕ್ಕೆ ಬಿಡಲಾಗುತ್ತದೋ, ಆಗ ನಮ್ಮ ರೋಗ ನಿರೋಧಕ ಶಕ್ತಿಯು ಕೊರೊನಾದ ಆಕೃತಿಯನ್ನು ಹೋಲುವ ವೈರಸ್‌ನ ಮೇಲೆ ದಾಳಿ ಮಾಡುತ್ತದೆ. ದಾಳಿ ಮಾಡುವ ಸಂದರ್ಭದಲ್ಲಿ **ಆ** ವೈರಸ್‌ನ ಮೇಲಿರುವ ಸ್ಪೈಕ್ ಪ್ರೊಟೀನುಗಳ ಆಕೃತಿಯನ್ನು ನಮ್ಮ **ದೇಹ** ನೆನಪಿನಲ್ಲಿಟ್ಟುಕೊಳ್ಳುತ್ತದೆ. ಮುಂದೆ ಏನಾದರೂ ಕೊರೊನಾ ವೈರಸ್ ನಮ್ಮ ದೇಹ ಪ್ರವೇಶಿಸಿತು ಎಂದರೆ ಕೂಡಲೇ ಅದರ ಮೇಲಿನ ಮುಳ್ಳಿನ ರೀತಿಯ ಆಕೃತಿಗಳನ್ನು ಗುರುತಿಸಿ, ಅದನ್ನು ಪುಡಿಗಟ್ಟುವಂಥ ಪ್ರತಿಕಾಯಗಳನ್ನು ಅತ್ಯಂತ ವೇಗವಾಗಿ ಹಾಗೂ ಸಕ್ಷವನ್ನು ನಮ್ಮ **ದೇಹ** ಬಿಡುಗಡೆ ಮಾಡಿ, ವೈರಸ್ ಅನ್ನು ಹೊಡೆದುರುಳಿಸುತ್ತದೆ!

## ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್

ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಅನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ(ಎನ್‌ಐವಿ) ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಭಾರತದಲ್ಲಿ ಸೋಂಕಿತರೊಬ್ಬರಿಂದ ಕೊರೊನಾ ವೈರಸ್‌ಗಳನ್ನು ಹೊರತೆಗೆದ ಎನ್‌ಐವಿ, ಲಸಿಕೆ ಅಭಿವೃದ್ಧಿಗಾಗಿ ಆ ಮಾದರಿಯನ್ನು ಭಾರತ್ ಬಯೋಟೆಕ್‌ಗೆ ಕೊಟ್ಟಿತ್ತು. ಭಾರತ್ ಬಯೋಟೆಕ್ ಹೇಗೆ ಲಸಿಕೆಯನ್ನು ಅಭಿವೃದ್ಧಿ ಮಾಡಿತು?

### ಇನ್‌ಆ್ಯಕ್ಟಿವೇಟೆಡ್ ವೈರಸ್

1 ಮೊದಲ ಹಂತವಾಗಿ ಅದು ಎನ್‌ಐವಿಯಿಂದ ಸಂಗ್ರಹಿಸಿದ ಕೊರೊನಾ ವೈರಸ್ ಅನ್ನು ಪ್ರಯೋಗಾಲಯದಲ್ಲೇ ಕೃತಕವಾಗಿ ಬೆಳೆಸಿತು. ನಂತರ ರಾಸಾಯನಿಕಗಳು, ರೇಡಿಯೇಷನ್‌ಗಳು ಅಥವಾ ವಿವಿಧ ತಾಪಮಾನದ ಮೂಲಕ ಕೋವಿಡ್‌ನ ರೋಗಕಾರಕ ಶಕ್ತಿಯನ್ನು ಸಂಪೂರ್ಣತಗ್ಗಿಸಲಾಯಿತು. ಅಂದರೆ, ಆ ವೈರಸ್‌ಗೆ ರೋಗ ಉಂಟುಮಾಡುವ ಸಾಮರ್ಥ್ಯ ಹಾಗೂ ದ್ವಿಗುಣಗೊಳ್ಳುವ ಸಾಮರ್ಥ್ಯ ಹೋಗಿಬಿಡುತ್ತದೆ. ಇದೇ ಕೊವ್ಯಾಕ್ಸಿನ್ ಲಸಿಕೆ



ಕ್ಷಕಿರಣ, ತಾಪಮಾನ ಅಥವಾ ರಾಸಾಯನಿಕಗಳ ಮೂಲಕ ವೈರಸ್‌ನ ರೋಗಕಾರಕ ಗುಣವನ್ನು ನಾಶಪಡಿಸುವುದು.

2 ಕೋವಿಡ್ ರೋಗಕಾರಕ ಶಕ್ತಿ ಕಳೆದುಕೊಂಡು ನಿಷ್ಕ್ರಿಯ ಗೊಂಡಿದ್ದರೂ ಅದರ ದೇಹರಚನೆಯಲ್ಲಿ ಬದಲಾವಣೆಯೇನೂ ಆಗಿರುವುದಿಲ್ಲ. ಲಸಿಕೆಯ ರೂಪದಲ್ಲಿ ಈ ನಿಷ್ಕ್ರಿಯ ವೈರಸ್‌ಗಳನ್ನು ಮಾನವನ ದೇಹಕ್ಕೆ ನುಸುಳಿಸಲಾಗುತ್ತದೆ. ಜತೆಗೆ ನಮ್ಮ ರೋಗ ನಿರೋಧಕ ಶಕ್ತಿಯನ್ನು ಪ್ರಚೋದಿಸುವಂಥ ಅಂಶಗಳೂ ಈ ಲಸಿಕೆಯಲ್ಲಿ ಇರುತ್ತವೆ. ಕೂಡಲೇ ನಮ್ಮ ರೋಗ ನಿರೋಧಕ ವ್ಯವಸ್ಥೆಯು ಈ ನಿಷ್ಕ್ರಿಯ ಕೊರೊನಾ ವಿರುದ್ಧ ಯಶಸ್ವಿಯಾಗಿ ಹೋರಾಡುತ್ತದೆ. ಅಲ್ಲದೇ ಹೋರಾಡುವ ಮುಂದೆ ಶತ್ರುವಿನ ಸಾಮರ್ಥ್ಯವನ್ನು ಸರಿಯಾಗಿ ನೆನಪಿಟ್ಟುಕೊಳ್ಳುತ್ತದೆ. ಮುಂದೆ ರೋಗಕಾರಕ ಕೊರೊನಾ ದೇಹ ಪ್ರವೇಶಿಸಿತು ಎಂದಿಟ್ಟುಕೊಳ್ಳಿ ಆಗ ಅದು ಕೂಡಲೇ ತನ್ನ ನೆನಪಿನ ಶಕ್ತಿಯ ಆಧಾರದಲ್ಲಿ ಅಪಾರಪ್ರಮಾಣದಲ್ಲಿ ನಿರ್ದಿಷ್ಟ ರೂಪದ ಪ್ರತಿಕಾಯಗಳನ್ನು ಬಿಡುಗಡೆ ಮಾಡಿ, ಅದನ್ನು ನಾಶ ಮಾಡುತ್ತದೆ.




## ಲಸಿಕೆ ಹೇಗೆ ಕೆಲಸ ಮಾಡುತ್ತದೆ?

ಲಸಿಕೆಗಳು ನೇರವಾಗಿ ವೈರಸ್‌ಗಳನ್ನು ಸಾಯಿಸುವುದಿಲ್ಲ. ಬದಲಾಗಿ ಅವು ನಮ್ಮ ದೇಹದ ರೋಗ ನಿರೋಧಕ ವ್ಯವಸ್ಥೆಗೆ ವೈರಸ್‌ಗಳನ್ನು ಗುರುತಿಸಿ, ಅವುಗಳ ವಿರುದ್ಧ ಹೋರಾಡುವುದನ್ನು ಕಲಿಸಿಕೊಡುತ್ತವೆ. ಗಮನಾರ್ಹ ಸಂಗತಿಯೆಂದರೆ, ಲಸಿಕೆಗಳು ಯಾವ ರೋಗದ ವಿರುದ್ಧ ಹೋರಾಡಲು ದೇಹಕ್ಕೆ ಕಲಿಸುತ್ತವೋ, ಅದೇ ವೈರಸ್‌ನ ನಿಷ್ಕ್ರಿಯ ರೂಪ ಅಥವಾ ಅದರ ಕೆಲವು ಗುಣಗಳು ಲಸಿಕೆಯಲ್ಲೇ ಇರುತ್ತವೆ! ಸರಳವಾಗಿ ಹೇಳಬೇಕೆಂದರೆ ಇದೊಂದು ರೀತಿಯಲ್ಲಿ ಶತ್ರುಗಳ ವಿರುದ್ಧ ಹೋರಾಡಲು ಸೈನಿಕರು ಶೂಟಿಂಗ್ ರೇಂಜ್‌ನಲ್ಲಿ ಮಾನವನ ಕಟೌಟ್ ನಿಲ್ಲಿಸಿ, ಫೈರಿಂಗ್ ಮಾಡುವ ಅಭ್ಯಾಸವಿದ್ದಂತೆ.

## ಹೊಸ ಲಸಿಕೆಗಳ ಲೋಕ

| ಕಂಪೆನಿ | ರೀತಿ | ಪರಿಣಾಮಕಾರಿತ್ವ | ಡೋಸ್‌ಗಳು | ಶೇಖರಣೆ |
|---|---|---|---|---|
| ಆಕ್ಸ್‌ಫರ್ಡ್ | ವೈರಲ್ ವೆಕ್ಟರ್ | 90% | 2 | 2-8 ಡಿಗ್ರಿ |
| ಭಾರತ್ ಬಯೋಟೆಕ್ | ನಿಷ್ಕ್ರಿಯ ವೈರಸ್ | ಬಹಿರಂಗವಾಗಿಲ್ಲ | 2 | 2-8 ಡಿಗ್ರಿ |
| ಮಾಡರ್ನಾ | ಎಂಆರ್‌ಎನ್‌ಎ | 94.1 % | 2 | -20 ಡಿಗ್ರಿ |
| ಫೈಜರ್(ಬಯೋಎನ್‌ಟೆಕ್) | ಎಂಆರ್‌ಎನ್‌ಎ | 95 % | 2 | -70ಡಿಗ್ರಿ |
| ಗಮಲಾಯಾ(ಸ್ಪುಟ್ನಿಕ್) | ವೈರಲ್ ವೆಕ್ಟರ್ | 91.4 % | 2 | 2-8 ಡಿಗ್ರಿ |

## ವಿವಿಧೆಡೆ ಬಳಕೆ

ಯುನೈಟೆಡ್ ಕಿಂಗ್ಡಮ್‌ನ ನಂತರ ಆಕ್ಸ್‌ಫರ್ಡ್ ಆಸ್ಟ್ರಾಜೆನೆಕಾದ ಲಸಿಕೆಗೆ(ಕೊವಿಶೀಲ್ಡ್‌ಗೆ) ಅನುಮತಿ ನೀಡಿರುವ ಎರಡನೇ ರಾಷ್ಟ್ರ ಭಾರತ. ಯುಕೆಯಲ್ಲಿ ಈಗಾಗಲೇ ಫೈಜರ್ ಲಸಿಕೆಗೆ ಡಿಸೆಂಬರ್ ತಿಂಗಳಲ್ಲೇ ಅನುಮತಿ ನೀಡಲಾಗಿದ್ದು, ಅದು ಬಳಕೆಯಲ್ಲಿದೆ. ಫೈಜರ್ ಲಸಿಕೆಯ ತುರ್ತು ಬಳಕೆಗೆ ಅಮೆರಿಕ, ಬಹ್ರೇನ್ ಮತ್ತು ಕೆನಡಾದಲ್ಲಿ ಅನುಮತಿ ಸಿಕ್ಕಿದ್ದು, ಮಾಡರ್ನಾ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಲಸಿಕೆಯನ್ನು ಅಮೆರಿಕದಲ್ಲಿ ಈಗಾಗಲೇ ಬಳಸಲಾಗುತ್ತಿದೆ. ಇನ್ನೊಂದೆಡೆ ರಷ್ಯಾ ಅಭಿವೃದ್ಧಿಪಡಿಸಿರುವ ಸ್ಪುಟ್ನಿಕ್ ಲಸಿಕೆಯನ್ನು ವಿವಿಧ ದೇಶಗಳು ಪ್ರಾಯೋಗಿಕ ಹಂತವಾಗಿ ಬಳಸಲು ಸಜ್ಜಾಗಿವೆ.

ಉದಯವಾಣಿ
ಜನಮನದ ಜೀವನಾಡಿ

# ನಗರ ಪ್ರದೇಶದಲ್ಲೇ ಸೋಂಕಿತರು ಅಧಿಕ

**ಬೆಂಗಳೂರು:** ಎರಡೂ ಹಂತಗಳ ಗ್ರಾಮ ಪಂಚಾಯ್ತಿ ಚುನಾವಣೆಗಳ ನಂತರವೂ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಕೊರೊನಾ ಸೋಂಕು ಪ್ರಕರಣಗಳಲ್ಲಿ ಯಾವುದೇ ಏರಿಕೆ ಕಂಡುಬಂದಿಲ್ಲ. ಬದಲಿಗೆ ನಗರ ಪ್ರದೇಶಗಳಲ್ಲೇ ಸೋಂಕಿತರ ಸಂಖ್ಯೆ ಅಧಿಕವಾಗಿದೆ!



ಚುನಾವಣೆ ಆದರಲ್ಲೂ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಎಂದರೆ ಗೋಜಲು-ಗದ್ದಲ ಸಾಮಾನ್ಯ. ಕೊರೊನಾ ಹಾವಳಿ ನಡುವೆ ಈಚೆಗೆ ನೂರಾರು ಗ್ರಾ.ಪಂ.ಗಳಿಗೆ ಚುನಾವಣೆ ನಡೆಯಿತು. ಈ ವೇಳೆ ಪ್ರಚಾರ, ಸಮಾರಂಭಗಳು, ನಗರ ಪ್ರದೇಶಗಳಿಂದ ಮತ ಚಲಾಯಿಸಲು ಬರುವವರು ಹೀಗೆ ನಾನಾ ಕಾರಣಗಳಿಂದ ಸೋಂಕಿನ ಪ್ರಮಾಣ ಹೆಚ್ಚಬಹುದು ಎಂಬ ಆತಂಕ ಇತ್ತು. ಆದರೆ ಆರೋಗ್ಯ ಇಲಾಖೆ ನೀಡಿದ ವರದಿಗಳು ಈ ದುಗುಡವನ್ನು ದೂರ ಮಾಡಿವೆ. ಸೋಂಕಿತರ ಪ್ರಕರಣಗಳಲ್ಲಿ ಯಾವುದೇ ಏರಿಕೆ ಕಂಡುಬಂದಿಲ್ಲ.

ಇದನ್ನು ಸ್ವತಃ ಆರೋಗ್ಯ ಇಲಾಖೆ ಸಂಶೋಧನಾಧಿಕಾರಿ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಡಾ.ಮುಹಮ್ಮದ್ ಷರೀಫ್ ಸ್ಪಷ್ಟಪಡಿಸಿದ್ದಾರೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರೆಸ್ ಇನ್‌ಫಾರ್ಮೇಷನ್ ಬ್ಯೂರೋ (ಪಿಐಬಿ) ಹಾಗೂ ಕರ್ನಾಟಕ ಪತ್ರಕರ್ತೆಯರ ಸಂಘ ಸಂಯುಕ್ತವಾಗಿ ಗುರುವಾರ ಹಮ್ಮಿಕೊಂಡಿದ್ದ 'ಕೋವಿಡ್ ವಿಭಿನ್ನ ಆಯಾಮಗಳು' ಕುರಿತ ವೆಬಿನಾರ್‌ನಲ್ಲಿ ಭಾಗವಹಿಸಿ ಮಾತನಾಡಿ, 'ರಾಜ್ಯದಲ್ಲಿ ಪ್ರಸ್ತುತ 9.3 ಲಕ್ಷ ಕೊರೊನಾ ವೈರಸ್ ಸೋಂಕು ಪ್ರಕರಣಗಳಿದ್ದು, ಇದರಲ್ಲಿ ಶೇ. 25-30ರಷ್ಟು ಗ್ರಾಮೀಣ ಪ್ರದೇಶಗಳಲ್ಲಿವೆ. ಚುನಾವಣೆ ನಂತರವೂ ಯಾವುದೇ ಏರಿಕೆ ಕಂಡುಬಂದಿಲ್ಲ. ಇದು ಸಮಾಧಾನಕರ ಸಂಗತಿ' ಎಂದು ಹೇಳಿದರು.

## ಮಾಸಾಂತ್ಯಕ್ಕೆ ಎರಡನೇ ಅಲೆ?

**ಬೆಂಗಳೂರು:** ರಾಜ್ಯದಲ್ಲಿ ಜನವರಿ ಕೊನೆಯ ವಾರ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಾಗಲಿದ್ದು, ಆ ಮೂಲಕ ಎರಡನೇ ಅಲೆ ಬರುವ ನಿರೀಕ್ಷೆ ಇದೆ ಎಂದು ಸಂಶೋಧನಾಧಿಕಾರಿ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಡಾ.ಮಹಮ್ಮದ್ ಷರೀಫ್ ಆತಂಕ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಈ ಮಾಸಾಂತ್ಯ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಸೋಂಕಿನ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದ್ದು, ಆ ಮೂಲಕ ಎರಡನೇ ಅಲೆಯ ಸ್ಪಷ್ಟಚಿತ್ರಣ ಲಭಿಸಲಿದೆ ಎಂದು ಮಾಹಿತಿ ನೀಡಿದರು.

**112 ಜನ ಈಗಲೂ ನಾಪತ್ತೆ:** ಬ್ರಿಟನ್‌ನಿಂದ ಕರ್ನಾಟಕಕ್ಕೆ ಬಂದವರಲ್ಲಿ 112 ಮಂದಿ ಈಗಲೂ ನಾಪತ್ತೆಯಾಗಿದ್ದಾರೆಂದು ಡಾ.ಮಹಮ್ಮದ್ ಷರೀಫ್ ತಿಳಿಸಿದರು.

ಸಂಯುಕ್ತ ಕರ್ನಾಟಕ

# ಮಾಸ್ಕ್ ದಂಡ 12 ಲಕ್ಷ ರೂ. ವಸೂಲಿ

**ಬೆಂಗಳೂರು:** ಮಾಸ್ಕ್ ಧರಿಸದ ಮತ್ತು ಸಾಮಾಜಿಕ ಅಂತರ ಕಾಪಾಡದ 5,029 ಜನರಿಂದ ಬಿಬಿಎಂಪಿ 12,54,500 ರೂ. ದಂಡ ವಸೂಲಿ ಮಾಡಿದೆ.

ಸೋಂಕು ಹರಡವುದನ್ನು ತಡೆಗಟ್ಟಲು ನಗರದಲ್ಲಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದನ್ನು ಬಿಬಿಎಂಪಿಯಲ್ಲಿ ವಾರ್ಡ್ ಮಾರ್ಷಲ್ ಹಾಗೂ ಮಾರ್ಷಲ್‌ಗಳ ವಿಶೇಷ ತಂಡಗಳು ಜ.4ರಿಂದ ಇಲ್ಲಿಯವರೆಗೆ 2585 ಪ್ರಕರಣ ದಾಖಲಿಸಿ 6,43,500 ರೂ. ದಂಡ ವಸೂಲಿ ಮಾಡಿದ್ದರೆ, ಪೊಲೀಸ್ ತಂಡಗಳು 2444 ಪ್ರಕರಣ ದಾಖಲಿಸಿ 6,11,000 ರೂ. ದಂಡ ವಿಧಿಸಲಾಗಿದೆ.

ನಗರದ ಪಶ್ಚಿಮ ವಲಯದಲ್ಲಿಯೇ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳದ 362 ಮಂದಿಯಿಂದ 90,500 ರೂ. ದಂಡ ವಸೂಲಿ ಮಾಡಿದ್ದರೆ, ದಕ್ಷಿಣ ವಲಯದಲ್ಲಿ 358 ಪ್ರಕರಣಗಳಲ್ಲಿ 89500 ರೂ. ದಂಡ ವಸೂಲಿ ಮಾಡಲಾಗಿದೆ. ಪೂರ್ವ ವಲಯದಲ್ಲಿ 235 ಪ್ರಕರಣ 58,750 ರೂ. ಮಹದೇವಪುರದಲ್ಲಿ 122 ಪ್ರಕರಣ, 30500 ರೂ., ಆರ್‌ಆರ್ ನಗರದಲ್ಲಿ 85 ಪ್ರಕರಣ 21250 ರೂ., ದಾಸರಹಳ್ಳಿಯಲ್ಲಿ 56 ಪ್ರಕರಣ 22500 ರೂ., ಬೊಮ್ಮಹಳ್ಳಿಯಲ್ಲಿ 90 ಪ್ರಕರಣ 22500 ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳ ಮಾಹಿತಿ ನೀಡಿದ್ದಾರೆ.

m/c/57576928

ಸಂಯುಕ್ತ ಕರ್ನಾಟಕ

# ಮೂರಂಕಿಗಿಳಿದ ಕೊರೊನಾ ಸೋಂಕು

ಸಂ.ಕ.ಸಮಾಚಾರ ಬೆಂಗಳೂರು

ರಾಜ್ಯದಲ್ಲಿ ಕೊರೊನಾ ವೈರಸ್ ಆತಂಕ ದಿನಕಳೆದಂತೆ ಕಡಿಮೆಯಾಗುತ್ತಿದೆ. ಗುರುವಾರ 761 ಹೊಸ ಸೋಂಕು ಪ್ರಕರಣಗಳು ಪತ್ತೆಯಾಗಿವೆ. ಆದರೆ, ಚೇತರಿಕೆ ಸಂಖ್ಯೆ ಇಳಿಮುಖವಾಗಿದ್ದು 812 ಸೋಂಕಿತರು ಮಾತ್ರ ಗುಣಮುಖರಾಗಿದ್ದಾರೆ. ಕಳೆದ 24 ಗಂಟೆಗಳಲ್ಲಿ 7 ಕೊರೊನಾ ವೈರಸ್ ಸಂಬಂಧಿತ ಸಾವು ಸಂಭವಿಸಿವೆ. ರಾಜ್ಯದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 9,24,898ಕ್ಕೆ ಏರಿದೆ. ಇದರಲ್ಲಿ 9,03,629 ಮಂದಿ ಚೇತರಿಸಿಕೊಂಡಿದ್ದಾರೆ. 9,119 ಪ್ರಕರಣಗಳು ಸಕ್ರಿಯವಾಗಿದ್ದು, 12,131 ಜನ ಕೊರೊನಾ ವೈರಸ್‌ನಿಂದ ಸಾವನ್ನಪ್ಪಿದ್ದರೆ, 205 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಗುರುವಾರ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ. 399 ಪಾಸಿಟಿವ್ ಪ್ರಕರಣಗಳು ಕಂಡುಬಂದಿದ್ದು, ಒಟ್ಟು ಸೋಂಕಿತರ ಸಂಖ್ಯೆ 3,91,184ಕ್ಕೆ ಏರಿದೆ. ಇದುವರೆಗೂ 3,81,220 ಜನ ಗುಣಮುಖರಾಗಿದ್ದಾರೆ. 5,622 ಪ್ರಕರಣಗಳು ಸಕ್ರಿಯವಾಗಿದ್ದು, 4,341 ಜನ ಕೊರೊನಾ ಕಾರಣದಿಂದ ಸಾವನ್ನಪ್ಪಿದ್ದಾರೆ.

ಸಂಯುಕ್ತ ಕರ್ನಾಟಕ Fri, 08 January 2021
epaper.samyukthakarnataka.co

ಸಂಯುಕ್ತ ಕರ್ನಾಟಕ

# ರಾಜ್ಯದ 263 ಕಡೆ ಇಂದು ಲಸಿಕೆ ತಾಲೀಮು

**ಬೆಂಗಳೂರು:** ರಾಜ್ಯದ 263 ಕಡೆಗಳಲ್ಲಿ ಲಸಿಕೆ ವಿತರಣೆಯ ತಾಲೀಮು ಜನವರಿ 8ರಂದು ನಡೆಯಲಿದೆ. ಲಸಿಕೆ ಬಂದ ಬಳಿಕ ವಿತರಣೆಯ ಕಾರ್ಯ ಜನಾಂದೋಲನದಂತೆ ನಡೆಯಬೇಕಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರೊಂದಿಗಿನ ಸಭೆ ಬಳಿಕ ಸುದ್ದಿಗಾರರೊಂದಿಗೆ ಸಚಿವರು ಮಾತನಾಡಿದರು. ಕೊರೊನಾ ಲಸಿಕೆಯ ವಿತರಣೆಗೆ ಸಿದ್ಧತೆ, ಕೇಂದ್ರ ಸರ್ಕಾರದಿಂದ ಬೇಕಿರುವ ಸಹಾಯದ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಜನವರಿ 8ರಂದು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಮೂರು ಕಡೆ ಲಸಿಕೆ ವಿತರಣೆಯ ತಾಲೀಮು ನಡೆಯಬೇಕು. ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಏಳು ಹಂತದಲ್ಲಿ ತಯಾರಿ ಮಾಡಿಕೊಂಡು 263 ಪ್ರದೇಶಗಳಲ್ಲಿ ಲಸಿಕೆಯ ವಿತರಣೆ ನಡೆಯಲಿದೆ. 24 ಜಿಲ್ಲಾಸ್ಪತ್ರೆ, 20 ಮೆಡಿಕಲ್ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 28 ಖಾಸಗಿ ಆಸ್ಪತ್ರೆಗಳಲ್ಲಿ ತಾಲೀಮು ನಡೆಯಲಿದೆ ಎಂದು ತಿಳಿಸಿದರು.

- ಲಸಿಕೆ ವಿತರಣೆ, ಕೇಂದ್ರ ಸಹಾಯ ಬಗ್ಗೆ ಚರ್ಚೆ
- 6.30 ಲಕ್ಷ ಸಿಬ್ಬಂದಿಯಿಂದ ಲಸಿಕೆ ವಿತರಣೆ
- ಹಕ್ಕಿಜ್ವರದ ಬಗ್ಗೆ ಭಯ ಬೇಡ, ಎಚ್ಚರವಿರಲಿ

ಕೇಂದ್ರ ಸರ್ಕಾರ 24 ಲಕ್ಷ ಸಿರಿಂಜ್‌ಗಳನ್ನು ಕಳುಹಿಸಿಕೊಟ್ಟಿದೆ. ಇವುಗಳನ್ನು ಎಲ್ಲ ಜಿಲ್ಲೆಗಳಿಗೆ ರವಾನಿಸಲಾಗಿದೆ. ರಾಜ್ಯದಲ್ಲಿ 10 ವಾಕ್-ಇನ್ ಕೂಲರ್, 4 ವಾಕ್-ಇನ್ ಫ್ರೀಜರ್, 3,201 ಐಎಲ್‌ಆರ್, 3039 ಡೀಪ್ ಫ್ರೀಜರ್, 3,312 ಕೋಲ್ಡ್ ಬಾಕ್ಸ್, 46,591 ಲಸಿಕೆ ಕ್ಯಾರಿಯರ್, 2,25,749 ಐಸ್ ಪ್ಯಾಕ್ ಸೌಲಭ್ಯವಿದೆ. ಕೇಂದ್ರ ಸರ್ಕಾರವು 225 ಲೀಟರ್ ಸಾಮರ್ಥ್ಯದ 64 ಐಎಲ್‌ಆರ್‌ಗಳನ್ನು ಕಳುಹಿಸಿಕೊಟ್ಟಿದೆ. ಇನ್ನೂ 2 ವಾಕ್-ಇನ್ ಕೂಲರ್, 1 ವಾಕ್-ಇನ್ ಫ್ರೀಜರ್ ಕಳುಹಿಸಿಕೊಡುವುದಾಗಿ ಕೇಂದ್ರ ತಿಳಿಸಿದೆ ಎಂದು ಮಾಹಿತಿ ನೀಡಿದರು.

ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 6.30 ಲಕ್ಷ ಸಿಬ್ಬಂದಿ ಲಸಿಕೆ ವಿತರಣೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನೂ ಕೂಡ ನೋಂದಣಿ ಮಾಡಿಸುವುದಾದರೆ ಅವಕಾಶವಿದೆ. 1 ಕೋಟಿ ಲಸಿಕೆಗಳನ್ನು ಕೇಂದ್ರ ಸರ್ಕಾರ ನಾನಾ ರಾಜ್ಯಗಳಿಗೆ ನೀಡಲಿದೆ. ಪೊಲೀಸರು, ಆರೋಗ್ಯ ಸಿಬ್ಬಂದಿ, ರಕ್ಷಣಾ ಸಿಬ್ಬಂದಿ, ಕೊರೊನಾ ನಿಯಂತ್ರಣದಲ್ಲಿ ಕಾರ್ಯಪ್ರವೃತ್ತರಾಗಿರುವವರಿಗೆ ಲಸಿಕೆ ಮೊದಲಿಗೆ ದೊರೆಯಲಿದೆ ಎಂದು ತಿಳಿಸಿದರು.

ಲಸಿಕೆಯಿಂದ ಯಾವುದೇ ಅಪಾಯವಿಲ್ಲ. ಇದರಿಂದಾಗಿ ಜನರಿಗೆ ಅನುಕೂಲವಾಗುತ್ತದೆ. ಎಲ್ಲರೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದ ಅವರು, ಜನವರಿ 17 ರಂದು ಪೋಲಿಯೋ ಲಸಿಕೆ ವಿತರಣೆ ಕಾರ್ಯ ನಡೆಯಲಿದೆ. ಒಟ್ಟು 65 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಉದ್ದೇಶವಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 6 ಕಾಗೆಗಳು ಸಾವನ್ನಪ್ಪಿದ್ದು, ಪರೀಕ್ಷೆಗೆ ಕಳುಹಿಸಲಾಗಿದೆ. ವರದಿ ಶೀಘ್ರ ನಿರೀಕ್ಷಿಸಲಾಗುತ್ತಿದೆ. ಹಕ್ಕಿಜ್ವರ ಬಾರದಂತೆ ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದ ಅವರು, ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುತ್ತಿರುವ ಸಮಯದಲ್ಲಿ ಕೊರೊನಾ ಬಗ್ಗೆ ವಿನಾಕಾರಣ ಭೀತಿ ಮೂಡಿಸಬಾರದು. ಸರ್ಕಾರ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಿದೆ ಎಂದು ಭರವಸೆ ನೀಡಿದರು.

ಸಂಯುಕ್ತ ಕರ್ನಾಟಕ

# ಎಂಟು ಆಸ್ಪತ್ರೆಗಳಲ್ಲಿ ಲಸಿಕೆ ತಾಲೀಮು

**ಸಂ.ಕ.ಸಮಾಚಾರ ಬೆಂಗಳೂರು**

ನಗರದ ಎಂಟು ಆಸ್ಪತ್ರೆಗಳಲ್ಲಿ ಕೊರೊನಾ ಲಸಿಕೆ ವಿತರಣೆ ತಾಲೀಮು ನಡೆಸಲಾಗುತ್ತಿದೆ. ಎರಡನೇ ಬಾರಿಗೆ ಶುಕ್ರವಾರ ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರ, ರೆಫೆರಲ್ ಆಸ್ಪತ್ರೆ, ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ಸೇರಿ 8 ಆಸ್ಪತ್ರೆಗಳಲ್ಲಿ ಬೆಳಗ್ಗೆ 9 ರಿಂದ 11 ಗಂಟೆವರೆಗೆ ಲಸಿಕೆ ತಾಲೀಮು ನಡೆಸಲಾಗುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜ.3ರಂದು ಕಾಮಾಕ್ಷಿಪಾಳ್ಯ ಮತ್ತು ವಿದ್ಯಾಪೀಠ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಆನೇಕಲ್ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ವಿತರಣೆ ತಾಲೀಮು ನಡೆಸಲಾಗಿತ್ತು. ಆದರೆ, ಈಗ ಕೇಂದ್ರ ಸರ್ಕಾರದ ಸೂಚನೆ ಮೇರೆಗೆ 2ನೇ ಬಾರಿ ಪಾಲಿಕೆಯ 8 ವಲಯಗಳಲ್ಲಿ ತಲಾ ಒಂದು ಕಡೆ ತಾಲೀಮು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಆಸ್ಪತ್ರೆಗಳಲ್ಲಿ ತಲಾ 25 ಆರೋಗ್ಯ ಸೇವಾ ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ. ವಿಜೇಂದ್ರ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಸೂಚನೆಯಂತೆ ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳನ್ನು ಬಿಟ್ಟು ಆಸ್ಪತ್ರೆಗಳಲ್ಲಿ ಮಾತ್ರ ಕೋವಿಡ್ ಲಸಿಕೆ ವಿತರಣಾ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಗರದಲ್ಲಿ ಸುಮಾರು 1,600 ಲಸಿಕೆ ವಿತರಣೆ ಕೇಂದ್ರ ಸ್ಥಾಪಿಸಲು ಬಿಬಿಎಂಪಿ, ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮತ್ತು ಮೆಡಿಕಲ್ ಕಾಲೇಜುಗಳನ್ನು ಬಳಸಿಕೊಳ್ಳಲಾಗುತ್ತಿದೆ. ಹೀಗಾಗಿ, ಎಲ್ಲ ವಲಯದ ಆರೋಗ್ಯಾಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದ್ದು, ಎಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಎಷ್ಟು ಲಸಿಕೆ ವಿತರಣೆ ಕೇಂದ್ರ ಆರಂಭಿಸಬಹುದು ಎಂದು ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.



ಬೊಮ್ಮನಹಳ್ಳಿ ವಲಯ–ಪ್ರಾಥಮಿಕ ಆರೋಗ್ಯ ಕೇಂದ್ರ, ಸಿಂಗಸಂದ್ರ. ಪೂರ್ವ ವಲಯ–ರೆಫರಲ್ ಆಸ್ಪತ್ರೆ, ಹಲಸೂರು. ಮಹದೇವಪುರ ವಲಯ–ಸಾರ್ವಜನಿಕ ಆಸ್ಪತ್ರೆ, ಕೆ.ಆರ್.ಪುರ ಸರ್ಕಾರಿ ಆಸ್ಪತ್ರೆ. ರಾಜೇಶ್ವರಿನಗರ ವಲಯ–ಸಾರ್ವಜನಿಕ ಆರೋಗ್ಯ ಕೇಂದ್ರ, ಕೆಂಗೇರಿ. ಪಶ್ಚಿಮ ವಲಯ–ಬೆಂಗಳೂರು ಸರ್ಕಾರಿ ವೈದ್ಯಕೀಯ ಕಾಲೇಜು. ದಕ್ಷಿಣ ವಲಯ–ಕಿಮ್ಸ್ ವೈದ್ಯಕೀಯ ಕಾಲೇಜು. ದಾಸರಹಳ್ಳಿ ವಲಯ–ಸಪ್ತಗಿರಿ ವೈದ್ಯಕೀಯ ಕಾಲೇಜು. ಯಲಹಂಕ ವಲಯ–ಆ್ಯಸ್ಟರ್ ಸಿಎಂಐ ಆಸ್ಪತ್ರೆಗಳಲ್ಲಿ ಲಸಿಕೆ ವಿತರಣೆ ತಾಲೀಮು ನಡೆಸಲಾಗುತ್ತಿದೆ.

ಹೊಸ ದಿಗಂತ

# ಕೊರೋನಾ: 399 ಹೊಸ ಪ್ರಕರಣ ಪತ್ತೆ

**ಬೆಂಗಳೂರು:** ನಗರದಲ್ಲಿ 399 ಹೊಸದಾಗಿ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು 451 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಈವರೆಗೆ ನಗರದಲ್ಲಿ 3,91,184 ಮಂದಿಗೆ ಕೊರೋನಾ ಸೋಂಕು ಪತ್ತೆಯಾಗಿದ್ದು 3,81,220 ಮಂದಿ ಗುಣಮುಖರಾಗಿದ್ದಾರೆ. ಸದ್ಯ 5622 ಸಕ್ರಿಯ ಪ್ರಕರಣಗಳಿದ್ದು, ಗುರುವಾರ ಐದು ಮಂದಿ ಸಾವನಪ್ಪಿದ್ದಾರೆ. ಒಟ್ಟು 4341 ಮಂದಿಯನ್ನು ಈವರೆಗೆ ಕೊರೋನಾ ಬಲಿ ತೆಗೆದುಕೊಂಡಿದೆ. 89 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹೊಸ ದಿಗಂತ

# ಬಿಬಿಎಂಪಿ ವ್ಯಾಪ್ತಿಯ 8 ಕಡೆ ಡ್ರೈರನ್ ಕಾರ್ಯಕ್ರಮ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯ ಒಟ್ಟು 8 ವಲಯಗಳಲ್ಲಿ ಶುಕ್ರವಾರ ಬೆಳಗ್ಗೆ 9ಕ್ಕೆ ಎರಡನೇ ಸುತ್ತಿನ ಲಸಿಕೆ ತಾಲೀಮು (ಡ್ರೈರನ್) ನಡೆಯಲಿದೆ.

ಮೊದಲ ಸುತ್ತಿನಲ್ಲಿ ಪಾಲಿಕೆಯ 2 ವಲಯಗಳಲ್ಲಿ ಹಾಗೂ ಹೊರವಲಯದಲ್ಲಿ 1 ಸೇರಿದಂತೆ ಒಟ್ಟು ಮೂರು ಕಡೆಗಳಲ್ಲಿ ಲಸಿಕೆ ತಾಲೀಮು ನಡೆಸಲಾಗಿತ್ತು. ಇದೀಗ 2ನೇ ಸುತ್ತಿನ ತಾಲೀಮು ನಡೆಸಲು ಬಿಬಿಎಂಪಿ ಸಜ್ಜಾಗಿದ್ದು, ಎಲ್ಲಾ ರೀತಿಯ ಮುಂಜಾಗೃತಾ ಕ್ರಮಗಳೊಂದಿಗೆ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜು, ಆಸ್ಪತ್ರೆಗಳಲ್ಲಿ ನಡೆಯಲಿದೆ. ಪ್ರತಿ ಕೇಂದ್ರಗಳಲ್ಲಿ ತಲಾ 25ರಂತೆ ಒಟ್ಟು 200 ಆರೋಗ್ಯ ಕಾರ್ಯಕರ್ತರನ್ನು ಲಸಿಕೆ ತಾಲೀಮಿಗೆ ಆಯ್ಕೆ ಮಾಡಲಾಗಿದೆ.

**ಎಲ್ಲೆಲ್ಲಿ ಡ್ರೈರನ್ :** ಬೊಮ್ಮನಹಳ್ಳಿ ವಲಯದ ಸಿಂಗಸಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ದಾಸರಹಳ್ಳಿಯ ಸಪ್ತಗಿರಿ ವೈದ್ಯಕೀಯ ಕಾಲೇಜು, ಪೂರ್ವ ವಯಲದ ಹೊಸೂರು ರೆಫರಲ್ ಆಸ್ಪತ್ರೆ, ಮಹದೇವಪುರದ ಕೆ.ಆರ್.ಪುರ ಸಾರ್ವಜನಿಕರ ಆಸ್ಪತ್ರೆ, ರಾಜರಾಜೇಶ್ವರನಗರದ ಕೆಂಗೇರಿ ಸಿಎಚ್‌ಸಿ, ದಕ್ಷಿಣ ವಲಯದ ಕಿಮ್ಸ್ ವೈದ್ಯಕೀಯ ಕಾಲೇಜು, ಪಶ್ಚಿಮ ವಲಯದ ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಯಲಹಂಕದ ಎಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಲಸಿಕೆ ತಾಲೀಮು ನಡೆಯಲಿದೆ.

ಹೊಸ ದಿಗಂತ

ಹೊಸ ದಿಗಂತ 2
08 Jan 2021

### ಇಂದು ಎರಡನೇ ಸುತ್ತಿನ ಡ್ರೈ ರನ್ | ಪ್ರತಿ ಜಿಲ್ಲೆಯಲ್ಲಿ ಮೂರು ಕಡೆ ತಾಲೀಮು | ವಾರಿಯರ್ಸ್‌ಗೆ ಪ್ರಥಮ ಆದ್ಯತೆ

# ರಾಜ್ಯಾದ್ಯಂತ ಲಸಿಕೆ ಜನಾಂದೋಲನ

• ದಿಗಂತ ವರದಿ, ಬೆಂಗಳೂರು

ದೇಶಾದ್ಯಂತ ಶುಕ್ರವಾರ ಕೊರೋನಾ ವಿರುದ್ಧ 2ನೇ ಸುತ್ತಿನ ಲಸಿಕೆ ವಿತರಣೆ ಕಾರ್ಯಕ್ರಮ ಡ್ರೈ ರನ್ ನಡೆಯಲಿದೆ. ರಾಜ್ಯದ 263 ಕಡೆಗಳಲ್ಲಿ ಜನಾಂದೋಲನದಂತೆ ನಡೆಯಲಿದೆ.

ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಜೊತೆ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊರೋನಾ




ಲಸಿಕೆಯ ವಿತರಣೆಗೆ ಸಿದ್ಧತೆ, ಕೇಂದ್ರ ಸರ್ಕಾರದಿಂದ ಬೇಕಿರುವ ಸಹಾಯದ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ ಎಂದರು.

**ಇಂದಿನಿಂದ ತಾಲೀಮು ಆರಂಭ:** ಜ.8 ರಂದು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಮೂರು ಕಡೆ ಲಸಿಕೆ ವಿತರಣೆಯ ತಾಲೀಮು ನಡೆಯಬೇಕಿತ್ತು. ಆದರೆ, ಪ್ರತಿ ಜಿಲ್ಲೆಯಲ್ಲಿ 7 ವ್ಯವಸ್ಥೆಯಲ್ಲಿ ತಯಾರಿ ಮಾಡಿಕೊಂಡು 263 ಪ್ರದೇಶಗಳಲ್ಲಿ ಲಸಿಕೆಯ ವಿತರಿಸಲಾಗುವುದು. 24 ಜಿಲ್ಲಾಸ್ಪತ್ರೆ, 20 ವೈದ್ಯಕೀಯ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 28 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ತಾಲೀಮು ನಡೆಯಲಿದೆ ಎಂದರು.

**ಜಿಲ್ಲೆಗಳಲ್ಲಿ ಸಕಲ ವ್ಯವಸ್ಥೆ:** ಕೇಂದ್ರ ಸರ್ಕಾರ 24 ಲಕ್ಷ ಸಿರಿಂಜ್‌ಗಳನ್ನು ಕಳುಹಿಸಿಕೊಟ್ಟಿದೆ. ಇವುಗಳನ್ನು ಎಲ್ಲ ಜಿಲ್ಲೆಗಳಿಗೆ ಕಳುಹಿಸಿಕೊಡಲಾಗಿದೆ. ರಾಜ್ಯದಲ್ಲಿ 10 ವಾಕ್-ಇನ್ ಕೂಲರ್, 4 ವಾಕ್-ಇನ್ ಫ್ರೀಜರ್, 3,201 ಐಎಲ್‌ಆರ್, 3039 ಡೀಪ್ ಫ್ರೀಜರ್, 3,312 ಕೋಲ್ಡ್ ಬಾಕ್ಸ್, 46,591 ಲಸಿಕೆ ಕ್ಯಾರಿಯರ್, 2,25,749 ಐಸ್ ಪ್ಯಾಕ್ ಲಭ್ಯವಿದೆ. ಕೇಂದ್ರ ಸರ್ಕಾರವು 225 ಲೀಟರ್ ಸಾಮರ್ಥ್ಯದ 64 ಐಎಲ್‌ಆರ್‌ಗಳನ್ನು ಕಳುಹಿಸಿಕೊಟ್ಟಿದೆ. ಇನ್ನೂ 2 ವಾಕ್-ಇನ್ ಕೂಲರ್, 1 ವಾಕ್-ಇನ್ ಫ್ರೀಜರ್ ಕಳುಹಿಸಿಕೊಡುವುದಾಗಿ ಕೇಂದ್ರ ತಿಳಿಸಿದೆ ಎಂದು ಮಾಹಿತಿ ನೀಡಿದರು.

**ನೋಂದಣಿಗಿದೆ ಇನ್ನೂ ಅವಕಾಶ:** ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 6.30 ಲಕ್ಷ ಸಿಬ್ಬಂದಿ ಲಸಿಕೆ ವಿತರಣೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನೂ ನೋಂದಣಿ ಮಾಡಿಸುವುದಾದರೆ ಬರಬಹುದು. ಒಂದು ಕೋಟಿ ಲಸಿಕೆಯನ್ನು ಕೇಂದ್ರ ಸರ್ಕಾರ ವಿವಿಧ ರಾಜ್ಯಗಳಿಗೆ ನೀಡಲಿದೆ. ಪೊಲೀಸರು, ಆರೋಗ್ಯ ಸಿಬ್ಬಂದಿ, ರಕ್ಷಣಾ ಸಿಬ್ಬಂದಿ, ಕೊರೋನಾ ನಿಯಂತ್ರಣದಲ್ಲಿ ಕಾರ್ಯ ಪ್ರವೃತ್ತರಾಗಿರುವವರಿಗೆ ಲಸಿಕೆ ಮೊದಲಿಗೆ ದೊರೆಯಲಿದೆ ಎಂದು ಸಚಿವರು ತಿಳಿಸಿದರು.



### ಲಸಿಕೆಯಿಂದ ಜನರಿಗೆ ಅನುಕೂಲ

ಲಸಿಕೆಯಿಂದ ಯಾವುದೇ ಅಪಾಯವಿಲ್ಲ, ಇದರಿಂದಾಗಿ ಜನರಿಗೆ ಅನುಕೂಲವಾಗುತ್ತದೆ. ಎಲ್ಲರೂ ಜವಾಬ್ದಾರಿಯುತವಾಗಿ ಪಡೆದುಕೊಳ್ಳಬೇಕು. ಇನ್ನು ಜ.17 ರಂದು ಪೋಲಿಯೋ ಲಸಿಕೆ ವಿತರಣೆ ಕಾರ್ಯ ನಡೆಯಲಿದೆ. ಒಟ್ಟು 65 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಉದ್ದೇಶವಿದೆ ಎಂದು ಸಚಿವ ಸುಧಾಕರ್ ಮಾಹಿತಿ ನೀಡಿದರು.

**ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುತ್ತಿರುವ ಸಮಯದಲ್ಲಿ ಕೊರೊನಾ ಬಗ್ಗೆ ವಿನಾಕಾರಣ ಭೀತಿ ಮೂಡಿಸಬಾರದು. ಸರ್ಕಾರ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಿದೆ.**

■ **ಡಾ.ಕೆ. ಸುಧಾಕರ್**, ಆರೋಗ್ಯ ಸಚಿವ



- ಜಿಲ್ಲೆಯ ಕನಿಷ್ಠ ಏಳು ಕಡೆ ವ್ಯವಸ್ಥೆ
- 6.30 ಲಕ್ಷ ಸಿಬ್ಬಂದಿಯಿಂದ ನೋಂದಣಿ
- ಕೇಂದ್ರದಿಂದ 24 ಲಕ್ಷ ಸಿರಿಂಜ್ ರವಾನೆ
- ರಾಜ್ಯಾದ್ಯಂತ 263 ಪ್ರದೇಶಗಳಲ್ಲಿ ಲಸಿಕೆ ವಿತರಣೆ
- 24 ಜಿಲ್ಲಾಸ್ಪತ್ರೆ, 20 ವೈದ್ಯಕೀಯ ಕಾಲೇಜು
- 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ
- 87 ಪ್ರಾಥಮಿಕ ಆರೋಗ್ಯ ಕೇಂದ್ರ,
- 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ,
- 28 ಖಾಸಗಿ ಆರೋಗ್ಯ ಕೇಂದ್ರದಲ್ಲಿ ತಾಲೀಮು

### 812 ಮಂದಿ ಕೊರೋನಾದಿಂದ ಗುಣಮುಖ

ಬೆಂಗಳೂರು: ರಾಜ್ಯದಲ್ಲಿ 761 ಹೊಸದಾಗಿ ಕೋವಿಡ್ ಸೋಂಕಿತ ಪ್ರಕರಣಗಳು ಪತ್ತೆಯಾಗಿದ್ದು 812 ಮಂದಿ ಆಸ್ಪತ್ರೆಯಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಇದುವರೆಗೆ ರಾಜ್ಯದಲ್ಲಿ 9,24,898 ಮಂದಿಗೆ ಕೊರೋನಾ ಸೋಂಕು ದೃಢವಾಗಿದೆ. ಈ ಪೈಕಿ 9,119 ಸಕ್ರಿಯ ಪ್ರಕರಣಗಳಿವೆ. ಅಲ್ಲದೇ 205 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುರುವಾರ ಏಳು ಮಂದಿ ಕೊರೋನಾಗೆ ಸಾವನ್ನಪ್ಪಿದ್ದಾರೆ. ಇದುವರೆಗೆ ಸಾವನಪ್ಪಿರುವವರ ಸಂಖ್ಯೆ 12,131ಕ್ಕೇರಿದೆ.

ಹೊಸ ದಿಗಂತ

# ಸ್ಮಾರ್ಟ್ ಸಿಟಿ ಕಾಮಗಾರಿ ವಿಳಂಬ



**ಬೆಂಗಳೂರು:** ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿ ವಿಳಂಬವಾಗಿದ್ದು, ರೇಸ್‌ಕೋರ್ಸ್ ಹಾಗೂ ಶೇಷಾದ್ರಿಪುರದಲ್ಲಿ ನಡೆಯುತ್ತಿರುವ ಚರಂಡಿ ನಿರ್ಮಾಣ ಕಾಮಗಾರಿಯಿಂದ ವಾಹನ ಸವಾರರು ಪರದಾಡುವಂತಾಗಿದೆ.

ಸ್ಮಾರ್ಟ್ ಸಿಟಿ ಯೋಜನೆಯಡಿ ರೇಸ್‌ಕೋರ್ಸ್ ಹಾಗೂ ಶೇಷಾದ್ರಿಪುರದಲ್ಲಿ ಕೈಗೆತ್ತಿಕೊಂಡಿರುವ ರಸ್ತೆ ಅಗಲೀಕರಣ, ರಸ್ತೆ ಕಾಂಕ್ರೀಟೀಕರಣ, ಚರಂಡಿ ನಿರ್ಮಾಣ, ಫುಟ್‌ಪಾತ್ ಕಾಮಗಾರಿಗಳು ಆಮೆ ವೇಗದಲ್ಲಿ ನಡೆಯುತ್ತಿದೆ. ಒಂದೆಡೆ ಪಾದಾಚಾರಿಗಳಿಗೆ ನಡೆದುಕೊಂಡು ಹೋಗಲು ಫುಟ್‌ಪಾತ್ ಇಲ್ಲದೆ ಪರದಾಡುತ್ತಿದ್ದರೆ ಇನ್ನೊಂದೆಡೆ ಕಾಮಗಾರಿಯಿಂದಾಗಿ ಅರ್ಧಕ್ಕರ್ಧ ರಸ್ತೆಗಳು ಮುಚ್ಚಿ ಹೋಗಿರುವ ಹಿನ್ನೆಲೆ ಟ್ರಾಫಿಕ್ ಜಾಮ್‌ಗಳು ಆಗುತ್ತಿವೆ. ಇದರಿಂದ ವಾಹನ ಸಂಚಾರಕ್ಕೆ ಅಡಚಣೆಗಳು ಆಗುತ್ತಿವೆ.

ವಿಶಾಲವಾಗಿ ನಿರ್ಮಾಣ ಮಾಡಿರುವ ಫುಟ್‌ಪಾತ್ ಅನ್ನು ಸಂಪೂರ್ಣ ತೆಗೆದು ಹಾಕಿ ಚರಂಡಿ ನಿರ್ಮಾಣ ಮಾಡಲಾಗುತ್ತಿದೆ. ಜೆಸಿಬಿ ಟಿಪ್ಪರ್‌ಗಳು ಚರಂಡಿ ನಿರ್ಮಾಣಕ್ಕೆ ಅಗೆತ ಕೆಲಸ ಮಾಡುತ್ತಿದ್ದು, ಪಾದಾಚಾರಿಗಳಿಗೆ ನಡೆದುಕೊಂಡು ಹೋಗಲು ಫುಟ್‌ಪಾತ್ ಇಲ್ಲದೆ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಪರಿಸ್ಥಿತಿ ಎದುರಿಸುತ್ತಿದ್ದಾರೆ.

**ಮಳೆಯಿಂದ ರಸ್ತೆಗಳು ಕೆಸರುಮಯ:** ಕಾಮಗಾರಿ ಪ್ರಕ್ರಿಯೆ ನಡೆಯುತ್ತಿರುವ ನಡುವೆ ನಗರದಲ್ಲಿ ಭಾರೀ ಮಳೆಯಾಗುತ್ತಿದೆ. ರಸ್ತೆ ಬದಿಗೆ ಹಾಕಲಾಗಿರುವ ಮಣ್ಣು ಮಳೆಯಿಂದಾಗಿ ಕೆಸರುಗೊಂಡು ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಗಿದೆ. ಹೀಗಾಗಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಂಡಿರುವ ಗುತ್ತಿಗೆದಾರರು ಸ್ಮಾರ್ಟ್ ಆಗಿ ಸಾರ್ವಜನಿಕರಿಗೆ ಅಡಚಣೆ ಉಂಟಾಗದಂತೆ ಕಾಮಗಾರಿ ನಡೆಸಬೇಕಾಗಿದೆ ಎಂಬ ಸಲಹೆ ಸಾರ್ವಜನಿಕರಿಂದ ಕೇಳಿಬಂದಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ಮೊದಲ ಹಂತದಲ್ಲಿ 30 ಕೋಟಿ ಜನರಿಗೆ ಕೋವಿಡ್ ಲಸಿಕೆ

ಹೊಸದಿಲ್ಲಿ,ಜ.7: ದೇಶವು ಕೋವಿಡ್ ಲಸಿಕೆ ಅಭಿಯಾನಕ್ಕೆ ಸಿದ್ಧತೆಗಳ ಅಂತಿಮ ಹಂತದಲ್ಲಿದ್ದು, ಮೊದಲ ಹಂತದಲ್ಲಿ 30 ಕೋಟಿ ಜನರಿಗೆ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರು ಗುರುವಾರ ಇಲ್ಲಿ ತಿಳಿಸಿದರು. ಲಸಿಕೆ ನೀಡಿಕೆಗಾಗಿ ದೇಶವ್ಯಾಪಿ ಎರಡನೇ ಡ್ರೈ ರನ್ ಕಾರ್ಯಕ್ರಮ ಜ.8ರಂದು ನಡೆಯಲಿದ್ದು,ಮೊದಲನೇ ಡ್ರೈ ರನ್ ನಡೆಸಲಾಗಿದ್ದ ರಾಜ್ಯಗಳಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.

ಪೂರೈಕೆಯಾಗಲಿರುವ ಡೋಸ್‌ಗಳ ಪ್ರಮಾಣವನ್ನು ಅವಲಂಬಿಸಿ ಎಲ್ಲರಿಗೂ ಏಕಕಾಲದಲ್ಲಿ ಲಸಿಕೆ ನೀಡುವುದು ಸಾಧ್ಯವಾಗುವುದಿಲ್ಲ. ಹೀಗಾಗಿ ಆದ್ಯತೆ ಗುಂಪುಗಳನ್ನು ನಿರ್ಧರಿಸಲಾಗಿದೆ. ಆರೋಗ್ಯ ಕಾರ್ಯಕರ್ತರಿಂದ ಹಿಡಿದು ಮುನ್ಸಿಪಲ್ ನೌಕರರವರೆಗೆ ಮುಂಚೂಣಿಯ ಕೊರೋನ ಕಾರ್ಯಕರ್ತರು

## ಕೇಂದ್ರ ಆರೋಗ್ಯ ಸಚಿವ



ಮೊದಲ ಆದ್ಯತೆಯಾಗಿದ್ದು,ಇಂತಹವರ ಒಟ್ಟು ಸಂಖ್ಯೆ ಮೂರು ಕೋಟಿಯಷ್ಟಿದೆ. ಬಳಿಕ 27 ಕೋಟಿ ಜನರಿಗೆ ಲಸಿಕೆ ನೀಡಲಾಗುತ್ತಿದ್ದು,50 ವರ್ಷಕ್ಕಿಂತ ಮೇಲಿನವರು ಮತ್ತು ಮಧುಮೇಹ, ರಕ್ತದೊತ್ತಡ ಹಾಗೂ ಇತರ ದೀರ್ಘಕಾಲಿಕ ಕಾಯಿಲೆಗಳನ್ನು ಹೊಂದಿರುವ 50 ವರ್ಷಕ್ಕಿಂತ ಕೆಳಗಿನವರು ಈ ಗುಂಪಿನಲ್ಲಿ ಸೇರಿದ್ದಾರೆ ಎಂದು ಅವರು ತಿಳಿಸಿದರು.

ತಲಾ ಡೋಸ್‌ಗೆ 200 ರೂ.ಬೆಲೆಯಲ್ಲಿ 10 ಕೋಟಿ ಡೋಸ್‌ಗಳನ್ನು ಖರೀದಿಸಲು ಸರಕಾರವು ಒಪ್ಪಿದೆ ಎಂದು ಸಿರಮ್ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥ ಆದಾರ್ ಪೂನಾವಾಲಾ ಅವರು ಈ ಹಿಂದೆ ಮಾಧ್ಯಮಗಳಿಗೆ ತಿಳಿಸಿದ್ದರು. ಆದರೆ ಕೊನೇಕ್ಷಣದ ಮಾತುಕತೆಗಳ ಬಳಿಕ ಬೆಲೆಯಲ್ಲಿ ಬದಲಾವಣೆಯಾಗಬಹುದು ಎಂದು ಬಲ್ಲ ಮೂಲಗಳು ತಿಳಿಸಿವೆ.

ಸಾಮೂಹಿಕ ಲಸಿಕೆ ಅಭಿಯಾನವನ್ನು ಆರಂಭಿಸಲು ದಿನಾಂಕವನ್ನು ಸರಕಾರವು ಇನ್ನು ನಿಗದಿಗೊಳಿಸಬೇಕಿದೆ. ಔಷಧಿಗಳ ಮಹಾ ನಿಯಂತ್ರಕರು ತುರ್ತು ಬಳಕೆಗಾಗಿ ಎರಡು ಕೋವಿಡ್ ಲಸಿಕೆಗಳಿಗೆ ರವಿವಾರ ಅನುಮತಿಯನ್ನು ಮಂಜೂರು ಮಾಡಿದ್ದು, ಡ್ರೈರನ್‌ನ ಮರುಮಾಹಿತಿಗಳನ್ನು ಆಧರಿಸಿ 10 ದಿನಗಳಲ್ಲಿ ಲಸಿಕೆ ನೀಡಿಕೆ ಆರಂಭವಾಗಲಿದೆ ಎಂದು ಆರೋಗ್ಯ ಸಚಿವಾಲಯವು ತಿಳಿಸಿತ್ತು.

## 263 ಕಡೆಗಳಲ್ಲಿ ಕೊರೋನ ನಿಯಂತ್ರಣ ಲಸಿಕೆ ತಾಲೀಮು

### ‘ಹಕ್ಕಿಜ್ವರದ ಬಗ್ಗೆ ಭಯ ಬೇಡ, ಎಚ್ಚರವಿರಲಿ’

ಡಾ.ಕೆ.ಸುಧಾಕರ್



ಬೆಂಗಳೂರು, ಜ.7: ರಾಜ್ಯದ 263 ಕಡೆಗಳಲ್ಲಿ ಕೊರೋನ ನಿಯಂತ್ರಣ ಲಸಿಕೆ ವಿತರಣೆಯ ತಾಲೀಮು(ಡ್ರೈ ರನ್) ನಡೆಯಲಿದೆ. ಲಸಿಕೆ ಬಂದ ಬಳಿಕ ವಿತರಣೆಯ ಕಾರ್ಯ ಜನಾಂದೋಲನದಂತೆ ನಡೆಯಬೇಕಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ. ಗುರುವಾರ ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರೊಂದಿಗಿನ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. 6ನೇ ಪುಟಕ್ಕೆ

ಜನದನಿಯ ಸಾರಥಿ
ವಾರ್ತಾ ಭಾರತಿ

# ಲಸಿಕೆ ತಾಲೀಮು

ಕೊರೋನ ಸೋಂಕು ನಿಯಂತ್ರಣ ಲಸಿಕೆಯ ವಿತರಣೆಗೆ ಸಿದ್ಧತೆ, ಕೇಂದ್ರ ಸರಕಾರದಿಂದ ಬೇಕಿರುವ ಸಹಾಯದ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಜ.8ರಂದು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಮೂರು ಕಡೆ ಲಸಿಕೆ ವಿತರಣೆಯ ತಾಲೀಮು ನಡೆಯಬೇಕಿತ್ತು. ಆದರೆ, ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಏಳು ವ್ಯವಸ್ಥೆಯಲ್ಲಿ ತಯಾರಿ ಮಾಡಿಕೊಂಡು 263 ಪ್ರದೇಶಗಳಲ್ಲಿ ಲಸಿಕೆಯ ವಿತರಣೆ ನಡೆಯಲಿದೆ. 24 ಜಿಲ್ಲಾಸ್ಪತ್ರೆ, 20 ವೈದ್ಯಕೀಯ ಕಾಲೇಜು, 43 ತಾಲೂಕು ಆಸ್ಪತ್ರೆ, 31 ಸಮುದಾಯ ಆರೋಗ್ಯ ಕೇಂದ್ರ, 87 ಪ್ರಾಥಮಿಕ ಆರೋಗ್ಯ ಕೇಂದ್ರ, 30 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 28 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ತಾಲೀಮು ನಡೆಯಲಿದೆ ಎಂದು ಅವರು ತಿಳಿಸಿದರು.

ಕೇಂದ್ರ ಸರಕಾರ 24 ಲಕ್ಷ ಸಿರಿಂಜುಗಳನ್ನು ಕಳುಹಿಸಿಕೊಟ್ಟಿದೆ. ಇವುಗಳನ್ನು ಎಲ್ಲ ಜಿಲ್ಲೆಗಳಿಗೆ ಕಳುಹಿಸಿಕೊಡಲಾಗಿದೆ. ರಾಜ್ಯದಲ್ಲಿ 10 ವಾಕ್-ಇನ್ ಕೂಲರ್, 4 ವಾಕ್-ಇನ್ ಫ್ರೀಜರ್, 3,201 ಐಎಲ್‌ಆರ್, 3,039 ಡೀಪ್ ಫ್ರೀಝರ್, 3,312 ಕೋಲ್ಡ್ ಬಾಕ್ಸ್, 46,591 ಲಸಿಕೆ ಕ್ಯಾರಿಯರ್, 2,25,749 ಐಸ್ ಪ್ಯಾಕ್ ಲಭ್ಯವಿದೆ.

ಕೇಂದ್ರ ಸರಕಾರವು 225 ಲೀಟರ್ ಸಾಮರ್ಥ್ಯದ 64 ಐಎಲ್ ಆರ್‌ಗಳನ್ನು ಕಳುಹಿಸಿಕೊಟ್ಟಿದೆ. ಇನ್ನೂ 2 ವಾಕ್-ಇನ್ ಕೂಲರ್, 1 ವಾಕ್-ಇನ್ ಫ್ರೀಝರ್ ಕಳುಹಿಸಿಕೊಡುವುದಾಗಿ ಕೇಂದ್ರ ತಿಳಿಸಿದೆ ಎಂದು ಡಾ.ಸುಧಾಕರ್ ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.

ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 6.30 ಲಕ್ಷ ಸಿಬ್ಬಂದಿ ಲಸಿಕೆ ವಿತರಣೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನೂ ನೋಂದಣಿ ಮಾಡಿಸುವುದಾದರೆ ಬರಬಹುದು. 1 ಕೋಟಿ ಲಸಿಕೆಗಳನ್ನು ಕೇಂದ್ರ ಸರಕಾರ ನಾನಾ ರಾಜ್ಯಗಳಿಗೆ ನೀಡಲಿದೆ. ಪೊಲೀಸರು, ಆರೋಗ್ಯ ಸಿಬ್ಬಂದಿ, ರಕ್ಷಣಾ ಸಿಬ್ಬಂದಿ, ಕೊರೋನ ನಿಯಂತ್ರಣದಲ್ಲಿ ಕಾರ್ಯಪ್ರವೃತ್ತರಾಗಿರುವವರಿಗೆ ಲಸಿಕೆ ಮೊದಲಿಗೆ ದೊರೆಯಲಿದೆ ಎಂದು ಅವರು ತಿಳಿಸಿದರು.

**ಹಕ್ಕಿಜ್ವರ ಎಚ್ಚರಿಕೆ ಅಗತ್ಯ:** ಜ.17 ರಂದು ಪೋಲಿಯೊ ಲಸಿಕೆ ವಿತರಣೆ ಕಾರ್ಯ ನಡೆಯಲಿದೆ. ಒಟ್ಟು 65 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಉದ್ದೇಶವಿದೆ. ದಕ್ಷಿಣ ಕನ್ನಡದಲ್ಲಿ ಆರು ಕಾಗೆಗಳು ಸಾವನ್ನಪ್ಪಿದ್ದು, ಪರೀಕ್ಷೆಗೆ ಕಳುಹಿಸಲಾಗಿದೆ. ಹಕ್ಕಿಜ್ವರ ಬಾರದಂತೆ ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುತ್ತಿರುವ ಸಮಯದಲ್ಲಿ ಕೊರೋನ ಸೋಂಕಿನ ಬಗ್ಗೆ ವಿನಾಕಾರಣ ಭೀತಿ ಮೂಡಿಸಬಾರದು. ಸರಕಾರ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಿದೆ ಎಂದು ಹೇಳಿದರು.

ಜಯ ಕಿರಣ
JAYAKIRANA MORNING DAILY

# ಅನ್ನ-ಬದುಕು ಕೊಟ್ಟ ಬಿಬಿಎಂಪಿ ಕಟ್ಟಡದಲ್ಲೇ ಗುತ್ತಿಗೆದಾರ ಆತ್ಮಹತ್ಯೆ

ಬೆಂಗಳೂರು: ತಾನೇ ಗುತ್ತಿಗೆ ಹಿಡಿದಿದ್ದ ಬೃಹತ್ ಕಟ್ಟಡದಲ್ಲಿ ಬಿಬಿಎಂಪಿ ಗುತ್ತಿಗೆದಾರನೋರ್ವ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಿಬಿಎಂಪಿಯ ಹಿರಿಯ ಗುತ್ತಿಗೆದಾರ ಹಾಗು ಬೃಹತ್ ಕಟ್ಟಡ, ರಂಗಮಂದಿರ ಹಾಗೂ ಕ್ರೀಡಾಂಗಣಗಳನ್ನು ನಿರ್ಮಿಸುವಲ್ಲಿ ಸಿದ್ಧಹಸ್ತರಾಗಿದ್ದ ವಾಣಿ ಅಲಿಯಾಸ್ ವಾಣಿಕೃಷ್ಣಂ ರಾಜು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ವಾಣಿ ಅಲಿಯಾಸ್ ವಾಣಿಕೃಷ್ಣಂ

ಬಿಬಿಎಂಪಿ ಗುತ್ತಿಗೆದಾರರ ವಲಯದಲ್ಲಿ "ವಾಣಿ" ಎಂದೇ ಕರೆಯಿಸಿಕೊಳ್ಳುತ್ತಿದ್ದ ಕೃಷ್ಣಂರಾಜು ತಮ್ಮ ವೃತ್ತಿ ಜೀವನದ ಬಹುತೇಕ ಅವಧಿಯನ್ನು ಬಿಬಿಎಂಪಿ ಅಂಗಳದಲ್ಲೇ ಕಳೆದಿದ್ದರು. ಬಿಬಿಎಂಪಿ ಕಟ್ಟಡವೊಂದರಲ್ಲಿ ಅವರು ತಮ್ಮ ಕೊನೆಯುಸಿರೆಳೆದಿದ್ದು ವಿಪರ್ಯಾಸ ಎನ್ನಲಾಗ್ತಿದೆ. ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಡಾ.ರಾಜ್ ಕುಮಾರ್ ಕ್ರೀಡಾಂಗಣ ಕಾಮಗಾರಿ ಸ್ಥಳದಲ್ಲೇ ಕೃಷ್ಣಂರಾಜು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗುತ್ತಿಗೆದಾರ ಎಂದ್ರೆ ಆತನಿಗೆ ವೃತ್ತಿ ಮತ್ಸರ–ವೈಷಮ್ಯ ಎನ್ನೋದು ಸಹಜ.ಆದ್ರೆ ಕೃಷ್ಣಂರಾಜು ಇದೆಲ್ಲಕ್ಕು ಅಪವಾದ ಎನ್ನುವಂತಿದ್ದರು. ಎಲ್ಲರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದರು. ತನ್ನಿಂದ ಇನ್ನೊಬ್ಬ ಗುತ್ತಿಗೆದಾರನಿಗೆ ತೊಂದರೆ ಆಗಬಾರದು ಎನ್ನುವ ಉದಾರ ಮನಸ್ತಿತಿ ಅವರದಾಗಿತ್ತು. ತನ್ನಿಂದ ತೊಂದರೆಯಾಗುತ್ತದೆ ಎನ್ನುವ ಸನ್ನಿವೇಶ ಬಂದಲ್ಲಿ ತನ್ನ ಪಾಲಿನ ಗುತ್ತಿಗೆಯನ್ನೇ ಇನ್ನೊಬ್ಬರಿಗೆ ಕೊನೆಯ ಪುಟಕ್ಕೆ

## ಆತ್ಮಹತ್ಯೆ

ಬಿಟ್ಟು ಕೊಡುತ್ತಿದ್ಗ ಔದಾರ್ಯ ಅವರದಾಗಿತ್ತು.ಹಾಗಾಗಿಯೇ ಅವರ ಆತ್ಮಹತ್ಯೆಯನ್ನು ಅಜಾತಶತೃವೊಬ್ಬನ ಅಗಲಿಕೆ ಎಂದು ಗುತ್ತಿಗೆದಾರರು ಕಂಬನಿ ಮಿಡಿಯಲಾರಂಭಿಸಿದ್ದರು.

ವಾಣಿ ಅವರ ಆತ್ಮಹತ್ಯೆಗೆ ನೈಜ ಕಾರಣ ತಿಳಿದುಬಂದಿಲ್ಲ. ಆದ್ರೆ ಗುತ್ತಿಗೆದಾರರ ವಲಯದಲ್ಲಿ ತಾನು ಗುತ್ತಿಗೆ ಹಿಡಿದಿದ್ದ ಒಳಾಂಗಣ ಕ್ರೀಡಾಂಗಣದ ಕೆಲವು ಕೆಲಸಗಳನ್ನು ಕೆಆರ್ ಐಡಿಎಲ್ ಗೆ ವಹಿಸಿದ್ದರಿಂದ ಬೇಸತ್ತು ಆತ್ಮಹತ್ಯೆಗೆ ಶರಣಾದ ರೆನ್ನಲಾಗ್ತಿದೆ.ಇತ್ತೀಚೆಗೆ ಆರ್ಥಿಕವಾಗಿ ಬಸವಳಿದಿದ್ದ ಕೃಷ್ಣಂರಾಜು ಅವರಿಂದ ಗುತ್ತಿಗೆ ಕೆಆರ್ ಐಡಿಎಲ್ ಪಾಲಾಗಿದ್ದರಿಂದ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದರೆನ್ನಲಾಗಿದೆ.ಇದು ಕೂಡ ಅವರ ಆತ್ಮಹತ್ಯೆಗೆ ಕಾರಣ ಎನ್ನಲಾಗ್ತಿದೆ.

ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಕೃಷ್ಣಂರಾಜು ಡೆತ್ ನೋಟ್ ಕೂಡ ಬರೆದಿಟ್ಟಿದ್ದರಂತೆ. ಇದರಲ್ಲಿ ಅವರು ತಮ್ಮ ಆತ್ಮಹತ್ಯೆಗೆ ನೈಜ ಕಾರಣ ಏನು ಎನ್ನುವುದನ್ನು ಎಳೆಎಳೆಯಾಗಿ ಬಿಡಿಸಿಟ್ಟಿರುವ ಸಾಧ್ಯತೆಗಳಿವೆ.ಆದ್ರೆ ಆ ಡೆತ್ ನೋಟ್ ಎಲ್ಲಿದೆ? ಮಹಾಲಕ್ಷ್ಮಿ ಲೇ ಔಟ್ ಪೊಲೀಸರ ಕೈ ಸೇರಿದೆಯಾ? ಎನ್ನುವುದು ಈವರೆಗೂ ಸ್ಪಷ್ಟವಾಗಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅನೇಕ ದಶಕಗಳಿಂದ ಮೇಜರ್ ಎನ್ನುವಂಥ ಪ್ರಾಜೆಕ್ಟ್‌ಗಳನ್ನು ಮಾಡಿ ಹಣವನ್ನೂ ಸಂಪಾದಿಸಿದ್ದ ಕೃಷ್ಣಂರಾಜು ಅವರಿಗೆಡಾ.ರಾಜ್ ಕುಮಾರ್ ಕ್ರೀಡಾಂಗಣದ ಕೆಲವು ಕೆಲಸಗಳ ಗುತ್ತಿಗೆ ತಪ್ಪಿದ್ದರಿಂದಾಗಿ ಹಣಕಾಸಿನ ಮುಗ್ಗಟ್ಟು ಎದುರಾಗಿತ್ತಾ.? ಎನ್ನುವ ಪ್ರಶ್ನೆ ಸೃಷ್ಟಿಯಾಗಿದೆ.

ತಮ್ಮ ಕ್ಷೇತ್ರ ವ್ಯಾಪ್ತಿಯ ಗುತ್ತಿಗೆದಾರನ ಆತ್ಮಹತ್ಯೆ ಬಗ್ಗೆ ಜಯಕಿರಣಕ್ಕೆ ಪ್ರತಿಕ್ರಿಯಿಸಿರುವ ಶಾಸಕ ಹಾಗು ಸಚಿವ ಕೆ.ಗೋಪಾಲಯ್ಯ, ವಾಣಿ ಸಾವಿನ ಬಗ್ಗೆ ನನಗೂ ಬೇಸರವಿದೆ.ಅವರ ಸಾವಿಗೆ ಯಾರೇ ಕಾರಣವಾದ್ರೂ ಅವರಿಗೆ ಕಠಿಣ ಶಿಕ್ಷೆಯಾಗಬೇಕೆಂದು ಬಯಸುತ್ತೇನೆ ಎಂದ್ರು, ಕಾಮಗಾರಿ ವಾಣಿ ಅವರ ಕೈ ತಪ್ಪೋಗೊಕ್ಕೆ ತನ್ನನ್ನು ಕಾರಣ ಎಂದು ಕೆಲವರು ಹೇಳ್ತಿರುವುದು ಮೂರ್ಖತನ. ನಾನೇ ಅವರಿಗೆ ನನ್ನ ಕ್ಷೇತ್ರದಲ್ಲಿ ಎಷ್ಟೋ ಕೆಲಸ ಕೊಡಿಸಿದ್ದೇನೆ.ಅಂತದ್ದರಲ್ಲಿ ನಾನೇಕೆ ಅವರ ಹೊಟ್ಟೆ ಮೇಲೆ ಹೊಡೆಯುವ ಕೆಲಸ ಮಾಡಲಿ,ಇದೆಲ್ಲಾ ಆಗದವರ ಪಿತೂರಿ ಅಷ್ಟೇ ಎಂದು ಖಡಕ್ಕಾಗಿ ರಿಯಾಕ್ಟ್ ಮಾಡಿದ್ದಾರೆ.

ಅದೇನೇ ಆಗಲಿ,ವಾಣಿ ಅಲಿಯಾಸ್ ಕೃಷ್ಣಂರಾಜು ಅವರ ಆತ್ಮಹತ್ಯೆಗೆ ಗೋಪಾಲಯ್ಯ ಅವರೇ ಹೇಳುವಂತೆ ಕಠಿಣಾತೀಕಠಿಣ ಶಿಕ್ಷೆ ಆಗಲೇಬೇಕಿದೆ. ಜಯಕಿರಣದ ಆಶಯವೂ ಅದೇ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

## ■ ನಾಳೆಯಿಂದ ಎಲ್ಲಾ ಜಿಲ್ಲೆಗಳಲ್ಲಿ

# ಲಸಿಕೆ ಹಂಚಿಕೆ ಪ್ರಯೋಗ

**ಬೆಂಗಳೂರು,ಜ.7-** ಮೊದಲನೆ ಹಂತದ ಲಸಿಕಾ ಅಣಕು ಆಂದೋಲನ ಆಯ್ದ ಜಿಲ್ಲೆಗಳಲ್ಲಿ ಯಶಸ್ವಿಯಾದ ಬಳಿಕ ಅಂತಿಮ ಸುತ್ತಿನ ತಯಾರಿಯಾಗಿ ನಾಳೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಅಣಕು ಆಂದೋಲನ ನಡೆಯುತ್ತಿದ್ದು, ಲಸಿಕೆ ನೀಡಲು ಕೊನೆ ಕ್ಷಣದ ಭರ್ಜರಿ ತಯಾರಿಗಳು ನಡೆಯುತ್ತಿದೆ.

ಈಗಾಗಲೇ ಪ್ರಾಯೋಗಿಕವಾಗಿ ಐದು ಜಿಲ್ಲೆಗಳಲ್ಲಿ ಡ್ರೈರನ್(ಪೂರ್ವಾಭ್ಯಾಸ) ಯಶಸ್ವಿಯಾಗಿ ಮುಗಿದಿರುವ ಬೆನ್ನಲ್ಲೇ ನಾಳೆಯಿಂದ ರಾಜ್ಯ ಸರ್ಕಾರ 30 ಜಿಲ್ಲೆಗಳಲ್ಲೂ ಪೂರ್ವಾಭ್ಯಾಸ ನಡೆಸಲು ಮುಂದಾಗಿದೆ.

ಈ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಲಸಿಕೆ ಪೂರ್ವಾಭ್ಯಾಸಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದು, ರಾಜ್ಯದಲ್ಲಿ ಯಶಸ್ವಿಯಾಗಿ ಪೂರೈಕೆ ಮಾಡಲು ಸರ್ವಸನ್ನದ್ಧ ಮಾಡಿಕೊಂಡಿದೆ.

...ಪುಟ 2



## ಹಂಚಿಕೆ ಪ್ರಯೋಗ

ಬೆಂಗಳೂರು ಮತ್ತು ಬೆಳಗಾವಿ, ಲಸಿಕಾ ಉಗ್ರಾಣ ಹಾಗೂ ಶಿವಮೊಗ್ಗ, ಬಳ್ಳಾರಿ, ಕಲಬುರಗಿ, ಬಾಗಲಕೋಟೆ ಮತ್ತು ಮಂಗಳೂರಿನಲ್ಲಿ ಪ್ರಾದೇಶಿಕ ಲಸಿಕೆ ದಾಸ್ತಾನು ಕೇಂದ್ರಗಳಿವೆ. ಇಲ್ಲಿಂದ 2,855 ಶೀತಲ ಸರಣಿ ಪಾಯಿಂಟ್ ಗಳಿಗೆ ಲಸಿಕೆ ತಲುಪಲಿದೆ.

ಜನವರಿ 2 ರಂದು ರಾಜ್ಯದ 5 ಜಿಲ್ಲೆಗಳ 16 ಕೇಂದ್ರಗಳಲ್ಲಿ ನಡೆದಿದ್ದ ಪೂರ್ವಾಭ್ಯಾಸ ಬಹುತೇಕ ಯಶಸ್ವಿಯಾಗಿತ್ತು. ರಾಜ್ಯದ ಎಲ್ಲಾ ಜಿಲ್ಲೆಗಳ ತಲಾ ಐದು ಆರೋಗ್ಯ ಕೇಂದ್ರಗಳಲ್ಲಿ 150ಕ್ಕೂ ಹೆಚ್ಚು ಲಸಿಕಾ ಕೇಂದ್ರಗಳಲ್ಲಿ ಪೂರ್ವಾಭ್ಯಾಸ ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ನಾಳೆ ನಡೆಸುವ ಲಸಿಕೆ ತಾಲೀಮುಗಳಲ್ಲಿ ಖಾಸಗಿ ಆಸ್ಪತ್ರೆಗಳನ್ನೂ ಕೂಡ ಸೇರಿಸಿಕೊಳ್ಳಬೇಕು ಎಂಬ ಚರ್ಚೆಗಳು ಆರಂಭವಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಲಾ 25 ಫಲಾನುಭವಿಗಳನ್ನು ಮತ್ತು ಖಾಸಗಿ ಆಸ್ಪತ್ರೆಗಳಿಗೆ 100 ಫಲಾನುಭವಿಗಳನ್ನು ನಿಗದಿಪಡಿಸುವ ಚಿಂತನೆ ನಡೆದಿದೆ. ಈಗಾಗಲೇ ಒಂದು ಬಾರಿ ಲಸಿಕೆ ಹಾಕುವ ಪೂರ್ವಾಭ್ಯಾಸ ಮಾಡಲಾಗಿದ್ದು, ಶುಕ್ರವಾರ ರಾಜ್ಯದಾತ್ಯಂತ 2ನೇ ಪೂರ್ವಾಭ್ಯಾಸ ನಡೆಸಲು ಉದ್ದೇಶಿಸಲಾಗಿದೆ. ಲಸಿಕೆ ನೀಡಲು ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಿದ್ದು, ಅಗತ್ಯ ಪ್ರಮಾಣದ ಲಸಿಕಾ ಕೇಂದ್ರಗಳನ್ನು ಗುರುತಿಸಲಾಗಿದೆ.

28,427 ಲಸಿಕಾ ಕೇಂದ್ರಗಳನ್ನು ನಿಗದಿಪಡಿಸಲಾಗಿದೆ. 9,807 ಮಂದಿ ಆರೋಗ್ಯ ಸಿಬ್ಬಂದಿಗಳಿಗೆ ಲಸಿಕೆ ನೀಡಲು ತರಬೇತಿ ನೀಡಲಾಗಿದೆ. 2,855 ಕೋಲ್ಡ್ ಚೈನ್ ಪಾಯಿಂಟ್‌ಟಗಳನ್ನು ಲಸಿಕೆ ಸಂಗ್ರಹ, ವಿತರಣೆಗೆ ಗುರುತಿಸಲಾಗಿದೆ. ಒಂದು ಕೇಂದ್ರದಲ್ಲಿ ತಲಾ 100 ಮಂದಿಗೆ ಲಸಿಕೆ ನೀಡಲಾಗುತ್ತದೆ. ಲಸಿಕೆ ನೀಡಲು ಈಗಾಗಲೇ 24 ಲಕ್ಷ ಸಿರಿಂಜ್ ಗಳನ್ನು ಜಿಲ್ಲಾ ಕೇಂದ್ರಗಳಿಗೆ ರವಾನಿಸಲಾಗಿದೆ. ಕೇಂದ್ರದಿಂದ ಇನ್ನೂ 31 ಲಕ್ಷ ಸಿರಿಂಜ್ ಗಳು ಬರಬೇಕಿದೆ. ಲಸಿಕೆಗಳನ್ನು ಸಂಗ್ರಹಿಸಿಡಲು 2ರಿಂದ 8 ಡಿಗ್ರಿ ಉಷ್ಣತೆ ಕಾಪಾಡಿಕೊಳ್ಳುವ 64 ಬೃಹತ್ ಐಸ್ ಲೈನ್ಡ್ ರೆಫ್ರಿಜರೇಟ್ ಗಳು ರಾಜ್ಯಕ್ಕೆ ಬಂದಿದೆ. ಇದನ್ನು ಲಸಿಕಾ ಕೇಂದ್ರಗಳಿಗೆ ಬಳಸಲಾಗುತ್ತದೆ.

ಉಳಿದಂತೆ ಪೂರ್ವಾಭ್ಯಾಸ ಪ್ರಕಿಯೆಗಳು ಜನವರಿ 2 ರಂದು ನಡೆದಿದ್ದ ಮಾದರಿಯಲ್ಲಿಯೇ ನಡೆಯಲಿವೆ. ಫಲಾನಭವಿಗಳಿಗೆ ಮಾಹಿತಿ ನೀಡುವುದು, ಲಸಿಕಾ ಕೇಂದ್ರದಲ್ಲಿನ ವ್ಯವಸ್ಥೆ ಮತ್ತು ಸಿದ್ಧತೆ, ಭದ್ರತೆ, ಲಸಿಕೆ ಸಾಗಾಣಿಕೆ, ಕೋವಿಡ್ ಅಪ್ಲಿಕೇಷನ್ ಬಳಕೆ ಮುಂತಾದ ಅಂಶಗಳು ಲಸಿಕೆ ವಿತರಣೆಯ ಶಿಷ್ಟಾಚಾರದಂತಯೇ ಇರಲಿವೆ. ಪ್ರತೀ ಜಿಲ್ಲೆಗಳಲ್ಲಿ 5-6 ಕೇಂದ್ರಗಳಲ್ಲಿ ಲಸಿಕೆಯ ತಾಲೀಮು ನಡೆಯಲಿದ್ದು, 25 ಆರೋಗ್ಯ ಕಾರ್ಯಕರ್ತರು ಲಸಿಕೆ ಪಡೆಯಲಿದ್ದಾರೆಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಜ.2ರಂದು ನಡೆಸಲಾಗಿದ್ದ ಲಸಿಕೆ ತಾಲೀಮು ವೇಳೆ ಎದುರಾಗಿದ್ದ ಸವಾಲುಗಳು ಗಮನಕ್ಕೆ ಬಂದಿದ್ದು, ಈಗಾಗಲೇ ಕೇಂದ್ರಕ್ಕೆ ಈ ಬಗ್ಗೆ ಮಾಹಿತಿ ನೀಡಲಾಗಿದ. ಕೇಂದ್ರ ಸರ್ಕಾರ ನಿರ್ದೇಶನದಂತೆಯೇ ಲಸಿಕೆ ವಿತರಣೆ ತಾಲೀಮು ನಡೆಸುತ್ತಿದ್ದೇವೆ. ತಾಲೀಮಿನಿಂದ ಲಸಿಕೆ ವಿತರಣೆ ವೇಳೆ ಎದುರಾಗುವ ಸಮಸ್ಯೆಗಳು ಮುಂಚಿತವಾಗಿಯೇ ತಿಳಿದುಬರಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ಪಂಕಜ್ ಕುಮಾರ್ ಪಾಂಡೆಯವರು ಹೇಳಿದ್ದಾರೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಗುತ್ತಿಗೆದಾರ ಆತ್ಮಹತ್ಯೆ

ಬೆಂಗಳೂರು, ಜ.7- ಬಿಬಿಎಂಪಿ ಗುತ್ತಿಗೆದಾರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ವಯ್ಯಾಲಿಕಾವಲ್‌ನ ಕೋದಂಡರಾಮಪುರದ 12ನೆ ಕ್ರಾಸ್‌ನಲ್ಲಿ ವಾಸವಾಗಿದ್ದ ಕೃಷ್ಣಂರಾಜು (68) ...ಪುಟ 2

## ಆತ್ಮಹತ್ಯೆ

ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರರು ಎಂದು ಮಹಾಲಕ್ಷ್ಮಿ ಲೇಔಟ್ ಪೊಲೀಸರು ಈ ಸಂಜೆಗೆ ತಿಳಿಸಿದ್ದಾರೆ.

ಗೆಳೆಯರ ಬಳಗದಲ್ಲಿರುವ ಡಾ.ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣದ ಕಚೇರಿಯ ಕಿಟಕಿ ಕಂಬಿಗೆ ಕೃಷ್ಣರಾಜು ಅವರು ಹಗ್ಗದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಿನ್ನೆ ಸಂಜೆ 4 ರಿಂದ 8 ಗಂಟೆ ಮಧ್ಯೆ ಆತ್ಮಹತ್ಯೆ ಮಾಡಿಕೊಂಡಿರಬಹುದುದೆಂದು ಹೇಳಲಾಗಿದೆ.

ವಿಷಯ ತಿಳಿದ ನಂತರ ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಬಿಬಿಎಂಪಿ ಗುತ್ತಿಗೆ ಕಾಮಗಾರಿ ನಡಸಿದ್ದ ಇವರಿಗೆ ಹಣ ಬಂದಿರಲಿಲ್ಲ, ಅದಕ್ಕಾಗಿ ಹೆಚ್ಚು ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.